# ಬೆಳಗಾವಿ ವಾರ್ತೆ

ಕನ್ನಡ ದಿನ ಪತ್ರಿಕೆ, ಬೆಳಗಾವಿ

ಸಂಪಾದಕರು : ಮಹೇಶ್ವರಿ ಭೀಮಶಿ ಭರಮಣ್ಣವರ
EDITOR : MAHESHWARI BHIMASHI BHARAMANNAVARA

BELAGAVI VARTE
KANNADA DAILY MORNING BELAGAVI

G-mail: belagavivarte1@gmail.com

Volume: 01 Issue : 14 THURSDAY 19-03-2026 PRGI No : KNKAN/26/A0962 Pages:4 Rs.2.00 M: 9742418836


## ಕರ್ನಾಟಕದಲ್ಲಿ ಹಲವು ಪ್ಯಾರಾಮೆಡಿಕಲ್ ಕಾಲೇಜುಗಳು ಮುಚ್ಚುವ ಭೀತಿಯಲ್ಲಿವೆ: ಸಚಿವ ಶರಣ್ ಪ್ರಕಾಶ್ ಪಾಟೀಲ್



ಬೆಂಗಳೂರು: ಪ್ಯಾರಾಮೆಡಿಕಲ್ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ವಿಜ್ಞಾನ ಹಿನ್ನೆಲೆಯ ದ್ವಿತೀಯ ಪಿಯುಸಿ (ಖಜಭಿಂಟಿಜ ಕಗಅ) ವಿದ್ಯಾರ್ಥಿಗಳಿಗಷ್ಟೇ ಅರ್ಹತೆ ಇರಲಿದೆ ಎಂಬ ಸಹಾಯಕ ಮತ್ತು ಆರೋಗ್ಯ ಸೇವಾ ವೃತ್ತಿಗಳ ರಾಷ್ಟ್ರೀಯ ಆಯೋಗ (ಓಅಂಊಕ) ತೀರ್ಮಾನದಿಂದ ಕರ್ನಾಟಕದ ಪ್ಯಾರಾಮೆಡಿಕಲ್ ಕಾಲೇಜುಗಳು ಮುಚ್ಚುವ ಭೀತಿಯಲ್ಲಿವೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ ತಿಳಿಸಿದ್ದಾರೆ.

ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್ ಎಂಎಲ್‌ಸಿ ಐವಾನ್ ಡಿಸೋಜ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು ಉತ್ತರಿಸಿದರು. ಆಯೋಗದ ಹೊಸ ನಿಯಮದಿಂದ ಕರ್ನಾಟಕದ 640 ಪ್ಯಾರಾಮೆಡಿಕಲ್ ಕಾಲೇಜುಗಳಲ್ಲಿ (32 ಸರ್ಕಾರಿ ಮತ್ತು 608 ಖಾಸಗಿ) ವಿದ್ಯಾರ್ಥಿಗಳ ಕೊರತೆ ಉಂಟಾಗುವ ಸಾಧ್ಯತೆ ಇದೆ ಎಂದು ಐವಾನ್ ಡಿ'ಸೋಜಾ ಆತಂಕ ವ್ಯಕ್ತಪಡಿಸಿದರು.

ಪ್ಯಾರಾಮೆಡಿಕಲ್ ಕೋರ್ಸ್‌ಗಳನ್ನು ಆಯ್ಕೆಮಾಡಲು ಬಯಸುವ ವಿದ್ಯಾರ್ಥಿಗಳಿಗೆ ಇದು ದೊಡ್ಡ ಅಡ್ಡಿಯಾಗಿದೆ ಎಂದು ಶಾಸಕರು ಹೇಳಿದರು.

ಓಅಂಊಕ ವೃತ್ತಪತ್ರಿಕೆಯನ್ನು ಉಲ್ಲೇಖಿಸಿದ ಸಚಿವ ಶರಣ್ ಪ್ರಕಾಶ್ ಪಾಟೀಲ್, ಈ ನಿಯಮವು ದೇಶದಾದ್ಯಂತ ಅನ್ವಯವಾಗುತ್ತದೆ ಎಂದರು. ಕರ್ನಾಟಕದಲ್ಲಿ ಸಾವಿರಾರು ವಿದ್ಯಾರ್ಥಿಗಳು ಎಸ್ ಎಸ್ ಎಲ್ ಸಿ ಬಳಿಕ ಪ್ಯಾರಾಮೆಡಿಕಲ್ ಕೋರ್ಸ್‌ಗಳನ್ನು ಆಯ್ಕೆಮಾಡುತ್ತಾರೆ. ಆದರೆ ಈಗ ಸಹಾಯಕ ಮತ್ತು ಆರೋಗ್ಯ ಸೇವಾ ವೃತ್ತಿಗಳ ರಾಷ್ಟ್ರೀಯ ಆಯೋಗ ದ್ವಿತೀಯ ಪಿಯುಸಿ ವಿಜ್ಞಾನ ಹಿನ್ನೆಲೆಯ ವಿದ್ಯಾರ್ಥಿಗಳಿಗಷ್ಟೇ ಪ್ರವೇಶ ನೀಡಬೇಕು ಎಂದು ಕಡ್ಡಾಯಗೊಳಿಸಿದೆ. ಇದರಿಂದ ಪ್ಯಾರಾಮೆಡಿಕಲ್ ಕಾಲೇಜುಗಳು ಮುಚ್ಚುವ ಭೀತಿಯಲ್ಲಿವೆ ಎಂದು ಹೇಳಿದರು. ಈ ವಿಷಯವಾಗಿ ಓಅಂಊಕ ಅಧ್ಯಕ್ಷರೊಂದಿಗೆ ಮಾತನಾಡಿರುವುದಾಗಿ ಸಚಿವ ಶರಣ್ ಪ್ರಕಾಶ್ ಪಾಟೀಲ ತಿಳಿಸಿದರು.

## ಗೋ ದತ್ತು ಯೋಜನೆಯಲ್ಲಿ ಬೊಮ್ಮಾಯಿ, ಪ್ರಭು ಚೌಹಾಣ್ ಬಿಟ್ಟರೆ ಯಾವ ಬಿಜೆಪಿ ಶಾಸಕರು ದತ್ತು ಪಡೆದಿಲ್ಲ: ಪ್ರಿಯಾಂಕ್ ಖರ್ಗೆ



ಬೆಂಗಳೂರು: ಹಿಂದಿನ ಬಿಜೆಪಿ ಸರ್ಕಾರದಲ್ಲಿ ಗೋವುಗಳ ದತ್ತು ಯೋಜನೆ ಎಂದು ಆರಂಭಿಸಿದರು. ಹಾಸ್ಯಾಸ್ಪದ ಎಂದರೆ ಗೋ ದತ್ತು ಯೋಜನೆಯಲ್ಲಿ ಹಿಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಪ್ರಭು ಚೌಹಾಣ್ ಅವರನ್ನು ಬಿಟ್ಟರೆ ಯಾವ ಬಿಜೆಪಿ ಶಾಸಕರು ಕೂಡ ಗೋವುಗಳನ್ನು ದತ್ತು ಪಡೆದಿಲ್ಲ ಎಂದು ಸಚಿವ ಪ್ರಿಯಾಂಕ್ ಖರ್ಗೆ ಟೀಕಿಸಿದರು.

ಇಂದು ವಿಧಾನಸಭೆಯಲ್ಲಿ ಮಾತನಾಡಿದ ಅವರು, ಪ್ರಭು ಚೌಹಾಣ್ ಅವರು 11 ಗೋವುಗಳನ್ನು, ಬಸವರಾಜ ಬೊಮ್ಮಾಯಿಯವರು ಐದಾರು ಹಸುಗಳನ್ನು ದತ್ತು ತೆಗೆದುಕೊಂಡಿದ್ದು ಬಿಟ್ಟರೆ ಯಾವ ಬಿಜೆಪಿ ಶಾಸಕರು ಕೂಡ ದತ್ತು ತೆಗೆದುಕೊಂಡಿಲ್ಲ, ಆ ಯೋಜನೆ ಘೋಷಿಸುವಾಗ ಅನೇಕ ಬಿಜೆಪಿ ನಾಯಕರು ಸದನದಲ್ಲಿ ಇದ್ದರು, ಆದರೆ ಗೋವುಗಳನ್ನು ದತ್ತು ಪಡೆಯುವ ಗೋಜಿಗೆ ಯಾವ ಬಿಜೆಪಿ ಶಾಸಕರೂ ಕೂಡ ಹೋಗಿಲ್ಲ ಏಕೆ ಎಂದು ಪ್ರಶ್ನಿಸಿದರು.

ಸಚಿವರ ಪ್ರಶ್ನೆಗೆ ಬಿಜೆಪಿ ಶಾಸಕರು ಸೂಕ್ತ ರೀತಿಯಲ್ಲಿ ಉತ್ತರ ನೀಡಲು ಸಾಧವಾಗದೆ ಇಕ್ಕಟ್ಟಿಗೆ ಸಿಲುಕಿದ ಪರಿಸ್ಥಿತಿ ಸೃಷ್ಟಿಯಾಯಿತು.ಬಿಜೆಪಿ ಸದಸ್ಯ ಶರಣು ಸಲಗಾರ್ ಮಾತಿಗೆ ಸಚಿವ ಪ್ರಿಯಾಂಕ್ ಖರ್ಗೆ ಆಕ್ಷೇಪ ವ್ಯಕ್ತಪಡಿಸಿದರು. "ಗೋ ರಕ್ಷಣೆ ಬಗ್ಗೆ ಮಾತನಾಡುತ್ತಿದ್ದಾರೆ. ಆದರೆ ಗೋಮಾಂಸ ಮಾರಾಟ ಕಂಪನಿ ಯಾರದ್ದು? ಗೊತ್ತಾ ಎಂದು ಕಂಪನಿಯೊಂದರ ಹೆಸರು ಉಲ್ಲೇಖ ಮಾಡಿದರು.

ಈ ವೇಳೆ ಅಶ್ವತ್ಥ ನಾರಾಯಣ ಮಧ್ಯಪ್ರವೇಶ ಮಾಡಿ, "ಸರ್ಕಾರ ಕ್ರಮ ಕೈಗೊಳ್ಳಲಿ. ಪ್ರಿಯಾಂಕ್ ವಿಷಯಾಂತರ ಮಾಡ್ತಿದ್ದಾರೆ" ಎಂದು ಆಕ್ಷೇಪಿಸಿದರು. ಇದಕ್ಕೆ 'ನೀವು ಏಕೆ ಎದ್ದೇಳುತ್ತೀರಿ' ಎಂದು ಪ್ರಿಯಾಂಕ್ ಪ್ರಶ್ನಿಸಿದರು.

ಇದಕ್ಕೆ ಅಶ್ವತ್ಥ ನಾರಾಯಣ ತಿರುಗೇಟು ನೀಡಿ, "ಸರ್ಕಾರ ಸೂಕ್ಷ್ಮತೆ ಕಳೆದುಕೊಂಡಿದೆ. ಹಾಗಿದ್ದರೆ ನೀವು ಕ್ರಮ ಕೈಗೊಳ್ಳಿ. ಸರ್ಕಾರ ನಿಮ್ಮದು ಕಂಪನಿ ವಿರುದ್ಧ ಕ್ರಮ ಕೈಗೊಳ್ಳಿ" ಎಂದು ಅಶ್ವತ್ಥ ನಾರಾಯಣ ಸವಾಲು ಹಾಕಿದರು.

ಎಷ್ಟು ಗೋವುಗಳನ್ನು ದತ್ತು ಪಡೆದುಕೊಂಡಿದ್ದೀರಿ

ಹಿಂದಿನ ಸರ್ಕಾರದಲ್ಲಿ ಗೋ ದತ್ತು ಯೋಜನೆ ಎಂದಿತ್ತು. 11 ಗೋವುಗಳನ್ನು ಪ್ರಭು ಚೌಹಾಣ್ ದತ್ತು ಪಡೆದುಕೊಂಡಿದ್ದರು. ಬೊಮ್ಮಾಯಿ ಅವರು ಐದಾರು ಗೋವು ದತ್ತು ತೆಗೆದುಕೊಂಡಿದ್ದರು. ಅದನ್ನು ಹೊರತುಪಡಿಸಿ ಯಾವ ಬಿಜೆಪಿ ಶಾಸಕರು ಗೋ ದತ್ತು ಪಡೆದುಕೊಂಡಿಲ್ಲ. ಎಷ್ಟು ಬಿಜೆಪಿ ಶಾಸಕರು ಜನ ದತ್ತು ಪಡೆದುಕೊಂಡರು ಎಂಬ ಅಂಕಿ ಅಂಶ ನೀಡಿ ಎಂದು ಪ್ರಿಯಾಂಕ್ ಖರ್ಗೆ ಸವಾಲು ಹಾಕಿದರು. ಈ ವೇಳೆ ಬಿಜೆಪಿ ಸದಸ್ಯರು ಮತ್ತು ಪ್ರಿಯಾಂಕ್ ನಡುವೆ ಮಾತಿನ ಚಕಮಕಿ ನಡೆಯಿತು.

## ಬೆಳಗಾವಿ ಪಾಲಿಕೆಯಲ್ಲಿ ಕನ್ನಡಿಗರ ಪಾರುಪತ್ಯ.. ಪ್ರೀತಿ ಕಾಮಕರ ಮೇಯರ್, ಹಣಮಂತ ಕೊಂಗಾಲಿ ಉಪಮೇಯರ್



ಬೆಳಗಾವಿ : ಬೆಳಗಾವಿ ಮಹಾನಗರ ಪಾಲಿಕೆಯ 24ನೇ ಅವಧಿಯ ಮೇಯರ್ ಆಗಿ ವಾರ್ಡ್ ಸಂಖ್ಯೆ 21ರ ಪ್ರೀತಿ ವಿನಾಯಕ ಕಾಮಕರ ಹಾಗೂ ಉಪಮೇಯರ್ ಆಗಿ ವಾರ್ಡ್ ಸಂಖ್ಯೆ 46ರ ಹಣಮಂತ ಕೊಂಗಾಲಿ ಅವರು ಆಯ್ಕೆಯಾಗುವ ಮೂಲಕ ಪಾಲಿಕೆಯಲ್ಲಿ ಕನ್ನಡದ ಕಂಪನ್ನು ಚೆಲ್ಲಿದ್ದಾರೆ..

ಬುಧವಾರ ಬೆಳಗಾವಿ ಮಹಾನಗರ ಪಾಲಿಕಯಲ್ಲಿ ನಡೆದ ಮಹಾಪೌರ ಉಪ ಉಪ ಮಹಾಪೌರ ಚುನಾವಣೆಯ ಪ್ರಕ್ರಿಯೆ ನಡೆಯಿತು. ಎರಡೂ ಸ್ಥಾನಗಳು ಕನ್ನಡಿಗರ ಪಾಲಾಗಿದ್ದು ಈ ಬಾರಿಯ ವಿಶೇಷ. ಬಿಜೆಪಿ ಆಡಳಿತಕ್ಕೆ ಬಂದ ಮೇಲೆ ಇದು ನಾಲ್ಕನೇ ಅವಧಿ. ಕಳೆದ ಮೂರು ಅವಧಿಯಲ್ಲಿ ಒಂದನ್ನು ಮರಾಠರು, ಇನ್ನೊಂದು ಹುದ್ದೆಯನ್ನು ಕನ್ನಡಿಗರಿಗೆ ಹಂಚಲಾಗಿತ್ತು.

ಮೇಯರ ಸ್ಥಾನ ಸಾಮಾನ್ಯ ಮಹಿಳೆ ಹಾಗೂ ಉಪಮೇಯರ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿತ್ತು. ಮಹಾನಗರ ಪಾಲಿಕೆ ಪರಿಷತ್ ಸಭಾಂಗಣದಲ್ಲಿ ಬುಧವಾರ ನಡೆದ ಚುನಾವಣೆ ವೇಳೆ 21ನೇ ವಾರ್ಡಿನ ಬಿಜೆಪಿ ಸದಸ್ಯೆ ಪ್ರೀತಿ ಕಾಮಕರ ಹಾಗೂ ಕಾಂಗ್ರೆಸ್ ಬೆಂಬಲಿತ ಸ್ವತಂತ್ರ ಸದಸ್ಯೆ ಖುರ್ಷಿದಾ ದಾದಾಪೀರ್ ಮುಲ್ಲಾ ನಾಮಪತ್ರ ಸಲ್ಲಿಸಿದರು. ಪ್ರೀತಿ ಪರವಾಗಿ 39 ಹಾಗೂ ವಿರೋಧವಾಗಿ 18 ಮತಗಳು ಬಂದವು. ಖುರ್ಷಿದಾ ಪರವಾಗಿ 18 ಹಾಗೂ ವಿರೋಧವಾಗಿ 39 ಮತಗಳು ಬಂದವು, 21 ಮತಗಳ ಅಂತರದಿಂದ ಪ್ರೀತಿ ಮೇಯರ್ ಆಗಿ ಚುನಾಯಿತರಾದರು ಎಂದು ಪ್ರಾದೇಶಿಕ ಆಯುಕ್ತೆ ಜಾನಕಿ ಕೆ.ಎಂ. ಘೋಷಣೆ ಮಾಡಿದರು.

ನಂತರ ಉಪಮೇಯರ್ ಸ್ಥಾನಕ್ಕೆ 46ನೇ ವಾರ್ಡಿನ ಬಿಜೆಪಿ ಸದಸ್ಯ ಹಣಮಂತ ಕೊಂಗಾಲಿ ಹಾಗೂ 12ನೇ ವಾರ್ಡಿ ನ ಕಾಂಗ್ರೆಸ್ ಸದಸ್ಯ ಮೋದಿನ ಸಾಬ್ ಮುತವಾಲೆ ಕಣಕ್ಕಿಳಿದರು. ಕೊಂಗಾಲಿ ಪರವಾಗಿ 39 ವಿರೋಧವಾಗಿ 20 ಜನ ಕೈ ಎತ್ತಿದರು. ಮೋದಿನಸಾಬ್ ಪರವಾಗಿ 20 ಹಾಗೂ ವಿರೋಧವಾಗಿ 39 ಜನ ಕೈ ಎತ್ತಿದರು. ಹಣಮಂತ 19 ಮತಗಳ ಅಂತರದಿಂದ ಉಪಮೇಯರ್ ಆದರು ಎಂದು ಘೋಷಣೆ ಮಾಡಲಾಯಿತು. ಚುನಾವಣೆಯಲ್ಲಿ 6 ಮಂದಿ ಗೈರಾ ದರು. ಮೇಯರ್ ಮತದಾನ ವೇಳೆ ಇಬ್ಬರು ತಟಸ್ಥವಾಗಿ ಉಳಿದರು. ಉಪಮೇಯರ್‌ಗೆ ಎಲ್ಲರೂ ಮತ ಚಲಾಯಿಸಿದರು.

ಆಯ್ಕೆ ಘೋಷಿಸಿದ ಬಳಿಕ ಎಲ್ಲ ಸದಸ್ಯರು ಟೇಬಲ್ ಕುಟ್ಟಿ ಹರ್ಷ ವ್ಯಕ್ತಪಡಿಸಿದರು. ಆಡಳಿತ ಬಿಜೆಪಿ ಪಕ್ಷದ ಸದಸ್ಯರು ಭಾರತ್ ಮಾತಾ ಕಿ ಜೈ ಎಂದು ಘೋಷಣೆ ಮೊಳಗಿಸಿದರು. ಈ ವೇಳೆ ಶಾಸಕ ಅಭಯ ಪಾಟೀಲ, ವಿಧಾನ ಪರಿಷತ್ ಸದಸ್ಯ ಸಾಬಣ್ಣ ತಳವಾರ, ಬಿಜೆಪಿ ನಗರ ಘಟಕದ ಅಧ್ಯಕ್ಷೆ ಗೀತಾ ಸುತಾರ, ಮಾಜಿ ಶಾಸಕ ಅನಿಲ ಬೆನಕೆ ಕೂಡ ಹಾಜರಿದ್ದು ಶುಭಾಶಯ ಕೋರಿದರು.

## ಗ್ರಾಜ್ಯುವೇಶನ ಡೆ ಸಮಾರಂಭ



ಗೋಕಾಕ: ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಜ್ಞಾನ ದಾಸೋಹ ನೀಡಿ ಲಕ್ಷ್ಮೀ ಎಜುಕೇಶನ್ ಟ್ರಸ್ಟ್ ಅವರ ಉಜ್ವಲ ಭವಿಷ್ಯಕ್ಕಾಗಿ ಶ್ರಮಿಸುತ್ತಿದೆ ಎಂದು ಖನಗಾಂವದ ಆದರ್ಶ ವಿದ್ಯಾಲಯದ ಮುಖ್ಯೋಪಾಧ್ಯಾಯ ಎಂ.ಬಿ.ಪಾಟೀಲ್ ಹೇಳಿದರು.

ಶನಿವಾರದಂದು ನಗರದ ಶ್ರೀ ಲಕ್ಷ್ಮಣರಾವ ಜಾರಕಿಹೊಳಿ ಕನ್ನಡ ಮತ್ತು ಆಂಗ್ಲ ಮಾಧ್ಯಮದ ಪೂರ್ವ ಪ್ರಾಥಮಿಕ ಶಾಲೆಗಳ ಗ್ರಾಜ್ಯುವೇಶನ ಡೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಶಿಕ್ಷಣ ವ್ಯಾಪಾರ ಅಲ್ಲ ಅದು ಸೇವೆ, ಯಾವುದೇ ಫಲಾಪೇಕ್ಷೆ ವಿಲ್ಲದೆ ಸಂಸ್ಥೆ ಮಾದರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಈ ಸಂಸ್ಥೆಯಿಂದ ವೈದ್ಯಕೀಯ ಮಹಾವಿದ್ಯಾಲಯ ಪ್ರಾರಂಭವಾಗಲೆಂದ ಅವರು ಎಲ್.ಕೆ.ಜಿ ಯಿಂದ ವಿವಿಧ ವೃತ್ತಿಪರ ಹಾಗೂ ಪದವಿ ಕಾಲೇಜುಗಳನ್ನು ಪ್ರಾರಂಭಿಸಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಿದೆ.ಪಾಲಕರು ಇದರ ಸದುಪಯೋಗ ಪಡೆದುಕೊಂಡು ಮಕ್ಕಳಲ್ಲಿ ಕೌಶಲ್ಯಗಳನ್ನು ವೃದ್ಧಿಪಡಿಸಲು ಸ್ವಾಭಾವಿಕ ಶಿಕ್ಷಣ ನೀಡಿ ಅವರನ್ನು ಪ್ರತಿಭಾನ್ವಿತರಾಗಿಸಿ ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಸಂಸ್ಥೆ ಹಾಗೂ ಶಿಕ್ಷಕರೊಂದಿಗೆ ಸಹಕರಿಸುವಂತೆ ಸಲಹೆ ನೀಡಿದರು.

ಸಮಾರಂಭವನ್ನು ಸಂಸ್ಥೆಯ ಉಪಾಧ್ಯಕ್ಷೆ ಶ್ರೀಮತಿ ಸುವರ್ಣ ಭೀಮಶಿ ಜಾರಕಿಹೊಳಿ ಉದ್ಘಾಟಿಸಿದರು.

ವೇದಿಕೆಯಲ್ಲಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸನತ್ ಜಾರಕಿಹೊಳಿ, ಎನ್.ಎಸ್ ಮಗದುಮ್ಮ, ಕ್ರೀಡಾ ತರಬೇತುದಾರೆ ಅರ್ಚನಾ ಅಮಟೆ, ಎಸ್.ಎಲ್.ಜೆ ಪಿ.ಯು.ಕಾಲೇಜಿನ ಪ್ರಾಚಾರ್ಯ ಅರುಣ ಪೂಜೇರ, ಮುಖ್ಯೋಪಾಧ್ಯಾಯರುಗಳಾದ ಎಚ್.ವಿ.ಪಾಗನೀಸ, ಎ.ಎಂ ಸರಕಾವಾಸ, ಪಿ.ವಿ.ಚಚಡಿ ಇದ್ದರು.

## 2025–26 ನೇ ಸಾಲಿನ ಪರಿಷ್ಕೃತ ಆಯವ್ಯಯ ಮಂಡನೆ

ಗೋಕಾಕ: ನಗರಸಭೆ ಗೋಕಾಕ ಮತ್ತು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ 2025–26 ನೇ ಸಾಲಿನ ಪರಿಷ್ಕೃತ ಆಯವ್ಯಯ ಮತ್ತು 2026–27ನೇ ಸಾಲಿನ ರೂ. 63.32ಲಕ್ಷ ರೂ ಗಳ ಉಳಿತಾಯದ ಆಯವ್ಯಯವನ್ನು ಪೌರಾಯುಕ್ತ ರವಿ ರಂಗಸುಭೆ ಅವರು ಮಂಡಿಸಿದರು.

16ನೇ ಹಣಕಾಸು ಆಯೋಗದ ಅನುದಾನ, ರಾಜ್ಯ ಹಣಕಾಸು ಆಯೋಗದಿಂದ ಬಿಡುಗಡೆಯಾಗಬಹುದಾದ ಅನುದಾನ, ಮತ್ತು ಸ್ವಂತ ಮೂಲದಿಂದ ಸಂಗ್ರಹವಾಗುವ ತೆರಿಗೆ, ತೆರಿಗೇಯತರ ಆದಾಯಗಳು ಸೇರಿ ಒಟ್ಟು 61.46ಕೋಟಿ ನಿರೀಕ್ಷಿಸಲಾಗಿದೆ ಮತ್ತು 60.83ಕೋಟಿ ರೂಗಳನ್ನು ರಸ್ತೆ, ರಸ್ತೆಬದಿ ಚರಂಡಿ, ಮಳೆನೀರು ಚರಂಡಿ, ಕುಡಿಯುವ ನೀರು ಸರಬರಾಜು, ಬೀದಿ ದೀಪ, ಘನತಾಜ್ಯ ನಿರ್ವಹಣೆ, ಶೌಚಾಲಯ ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಹಾಗು ನಿರ್ವಹಣೆಗಾಗಿ ಕಾಯ್ದಿರಿಸಲಾಗಿದೆ. ಎಸ್.ಎಫ್.ಸಿ. ಹಾಗೂ ನಗರಸಭೆ ನಿಧಿಯಡಿ ಶೇ.24.10, 7.25 ಮತ್ತು 5ರ ವಿಭಾಗಗಳಲ್ಲಿ ಅಂದಾಜು 34.38 ಲಕ್ಷ ರೂಗಳನ್ನು ಕಾಯ್ದಿರಿಸಿರುವುದನ್ನು ವಿವರಿಸಿದರು.

ಸಭೆಯಲ್ಲಿ ನಗರಸಭೆಯ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲು ಮತ್ತು ವೆಚ್ಚಗಳ ನಿಯಂತ್ರಣಕ್ಕಾಗಿ ಸೂಚನೆಗಳನ್ನು ನೀಡಿ ಮಾನ್ಯ ಆಡಳಿತಾಧಿಕಾರಿಗಳು ಗೋಕಾಕ ನಗರಸಭೆಯ 2025–26 ನೇ ಸಾಲಿನ ಪರಿಷ್ಕೃತ ಆಯವ್ಯಯ ಮತ್ತು 2026–27 ನೇ ಸಾಲಿನ 63.32 ಲಕ್ಷಗಳ ಉಳಿತಾ ಯದ ಆಯವ್ಯಯಕ್ಕೆ ಅನುಮೋದನೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಲ್ಲಿಕಾರ್ಜುನ ಕಲಾದಗಿ ಮತ್ತು ಗೋಕಾಕ ನಗರಸಭೆಯ ಲೆಕ್ಕಾಧೀಕ್ಷಕ ಜಯನಾಯಕ್ ಎಂ.ಬಿ ರವರು ಉಪಸ್ಥಿತರಿದ್ದರು.

## ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರ ಮೆರವಣಿಗೆ



ಹುಬ್ಬಳ್ಳಿ: ನಿವೃತ್ ಪ್ರಾಧ್ಯಾಪಕರು, ಖ್ಯಾತ ಭಾಷಣಕಾರರು, ಹಿರಿಯರಾದ, ಶರಣ ತತ್ವ ಚಿಂತಕರು, ಬಸವ ಕೇಂದ್ರದ ಉಪಾಧ್ಯಕ್ಷರು , ಶರಣೆ ಗಂಗಾಂಬಿಕಾ ಬಳಗದ ಅಧ್ಯಕ್ಷರು, ಸಾಹಿತಿ ಡಾ ಸ್ನೇಹಾ ಭೂಸನೂರ ಅವರು ಹುಬ್ಬಳ್ಳಿ ಶಹರ ತಾಲೂಕು 11ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಯಾದ ಶುಭ ಸಂಧರ್ಭದಲ್ಲಿ ಲಿಂಗರಾಜನಗರದಲ್ಲಿ ಆಯೋಜಿಸಿದ್ದ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರ ಮೆರವಣಿಗೆಯಲ್ಲಿ ಹಿತೈಷಿಗಳು , ಮಾರ್ಗದರ್ಶಕರಾದ ಡಾ ಸ್ನೇಹಾ ಭೂಸನೂರ ಅವರಿಗೆ ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ, ಬಸವ ಪರಿಸರ ಸಂರಕ್ಷಣಾ ಸಮಿತಿಯ ವತಿಯಿಂದ ಗ್ರಂಥ ನೀಡಿ ಪ್ರೀತಿ, ಆತ್ಮೀಯತೆಯಿಂದ ಹೃದಯಪೂರ್ವಕವಾಗಿ ಗೌರವಿಸಲಾಯಿತು. ಅಭಿನಂದನೆಗಳನ್ನು ಸಲ್ಲಿಸಿ ಶುಭ ಕೋರಿದರು.

ವಿರೂಪಾಕ್ಷಪ್ಪ ಭೂಸನೂರ, ಸುಜಯ್ ಸುರೇಶ ಹೊರಕೇರಿ, ಸೋಹನ ಸುರೇಶ ಹೊರಕೇರಿ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ ಕಾರ್ಯದರ್ಶಿ, ಬಸವ ಪರಿಸರ ಸಂರಕ್ಷಣಾ ಸಮಿತಿಯ ಕಾರ್ಯದರ್ಶಿ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯ ಜಿಲ್ಲಾ ಘಟಕದ ಉಪಾಧ್ಯಕ್ಷ, ಕರ್ನಾಟಕ ವಚನ ಸಾಹಿತ್ಯ ಪರಿಷತ್‌ನ ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ, ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ ಟ್ರಸ್ಟಿ, ಗ್ರಂಥಪಾಲಕ ಡಾ. ಸುರೇಶ ಡಿ. ಹೊರಕೇರಿ, ಡಾ ಎಂ ಆರ್ ಪಾಟೀಲ, ಶಕುಂತಲಾ ಎಸ್ ಹೂಗಾರ, ಶಾಂತಪ್ಪ ವಿ ಹೂಗಾರ, ವಿದ್ಯಾ, ಅನಸೂಯಾ, ಸಿದ್ದಮ್ಮ, ಗಣ್ಯರು, ಮಕ್ಕಳು, ಮುಂತಾದವರು ಇದ್ದರು.

## ಹಿಂದೂ ಹಬ್ಬಗಳನ್ನ ಅದ್ದೂರಿಯಾಗಿ ಆಚರಿಸಲು ನಿರ್ಧಾರ



ಮುದ್ದೇಬಿಹಾಳ: ಹಿಂದು ಹಬ್ಬಗಳು ನಶಿಸುತ್ತಿರುವ ಹಿನ್ನೆಲೆಯಲ್ಲಿ ಪಟ್ಟಣದ ಎಲ್ಲ ಸಮುದಾಯದವರು ಸೇರಿ ಎಲ್ಲ ಹಬ್ಬಗಳನ್ನ ಅದ್ದೂರಿಯಾಗಿ ಆಚರಿಸಲು ಸಮಸ್ತ ದೈವ ನಿರ್ಧರಿಸಿದೆ ಎಂದು ಮುಖಂಡ ಬಸವರಾಜ ನಂದಿಕೇಶ್ವರಮಠ ಹೇಳಿದರು.

ಪಟ್ಟಣದ ಬಜಾರನಲ್ಲಿರುವ ಖಾಸ್ಗತೇಶ್ವರ ಮಠದಲ್ಲಿ ಹಮ್ಮಿಕೊಳ್ಳಲಾಗಿದ್ದ ಯುಗಾದಿ ಹಬ್ಬ ಆಚರಣೆಯ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಕಳೆದ ಬಣ್ಣದ ಹಬ್ಬದಲ್ಲಿ ಪ್ರಮುಖರು ಯಾರೂ ಬಣ್ಣದಾಟವನ್ನು ಆಡದೇ ಆ ಹಬ್ಬ ಕಳೆಗುಂದಿದ ಹಿನ್ನೆಲೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿದ್ದು ಎಲ್ಲ ಪ್ರಮುಖರು ಬೆಂಬಲಿಸಿದ್ದಾರೆ. ಹಾಗಾಗಿ ಬರುವ ಎಲ್ಲ ಹಿಂದು ಹಬ್ಬಗಳನ್ನ ಅತ್ಯಂತ ಶ್ರದ್ಧಾಭಕ್ತಿಯಿಂದ ಎಲ್ಲರೂ ಒಟ್ಟುಗೂಡಿ ಆಚರಿಸಲು ನಿರ್ಧರಿಸಿದ್ದೇವೆ. ಇದಕ್ಕೆ ಮೂಂಚೂಣೆಯಲ್ಲಿ ನಿಂತು ಶ್ರಮಿಸಿದ ಮಹಾಂತೇಶ ಮೋಟಗಿಯವರಿಗೆ ಧನ್ಯವಾದಗಳನ್ನು ಅರ್ಪಿಸುವದಾಗಿ ತಿಳಿಸಿದರು.

ಭಾರತೀಯರಿಗೆ ಹೊಸ ವರ್ಷವೆಂದರೆ ಯುಗಾದಿ ಯಾಕೆಂದರೆ ಆ ದಿನ ಪ್ರಕೃತಿಯೂ ಕೂಡಾ ಹೊಸತನಕ್ಕೆ ಕಾಲಿಡುತ್ತದೆ. ಹಾಗಾಗಿ ಈ ಹಬ್ಬದಿಂದಲೇ ಪಟ್ಟಣದ ಎಲ್ಲ ಹಿಂದೂ ಬಾಂಧವರು ಸೇರಿ ಎಲ್ಲ ಹಬ್ಬಗಳನ್ನ ಒಗ್ಗಟ್ಟಾಗಿ ಆಚರಿಸುವ ನಿರ್ಧಾರಕ್ಕೆ ಬರಲಾಗಿದೆ. ಇದಕ್ಕೆ ಎಲ್ಲ ಸಮುದಾಯದವರ ಸಹಕಾರ ಕೋರುತ್ತೇವೆ. ಜೊತೆಗೆ ಈ ಯುಗಾದಿ ಹಬ್ಬವನ್ನ ಅದ್ದೂರಿಯಾಗಿಸಲು ಹಬ್ಬದ ದಿನದಂದು ಪೂಜ್ಯರೊಬ್ಬರನ್ನು ಬರಮಾಡಿಕೊಂಡು ಅವರಿಂದ ಕೆಲ ಹಿತವಚನಗಳನ್ನ ಹೇಳಿಸಿ ಅಲ್ಲಿಯೇ ಬೇವು ಕುಡಿದು ಈ ವರ್ಷದ ಯುಗಾದಿಯನ್ನು ಸಂಭ್ರಮಿಸೋಣ. ಇದಕ್ಕೆ ಎಲ್ಲರ ಸಹಕಾರ ಅಗತ್ಯ ಎಂದರು.

ಇದೇ ವೇಳೆ ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಪ್ರಭುರಾಜ ಕಲಬುರ್ಗಿ ಮುಖಂಡರಾದ ಪ್ರಭು ಕಡಿ, ಅಶೋಕ ನಾಡಗೌಡ, ಗುರುಸ್ವಾಮಿ ಬೂದಿಹಾಳ ಮಠ, ರಾಜು ಕರಡ್ಡಿ, ಸಂಗನಗೌಡ ಪಾಟೀಲ, ವೆಂಕನಗೌಡ ಪಾಟೀಲ ಮತ್ತಿತರು ಸಲಹೆ ಸೂಚನೆಗಳನ್ನ ನೀಡಿದರು.

ಸಭೆಯಲ್ಲಿ ಸತೀಶ ಓಸ್ವಾಲ್, ಸಂಗಣ್ಣ ಜಿಟಿಸಿ, ಭರತ ಬೋಸಲೆ, ಸಿಪಿ ಸಜ್ಜನ, ಪರಶುರಾಮ ನಾಲತವಾಡ, ಚಂದ್ರು ಕಲಾಲ, ಮಹಾಂತೇಶ ಮಠಪತಿ, ಕಾಶಿನಾಥ ಬಿರಾದಾರ, ಪ್ರಭು ನಂದೆಪ್ಪನವರ, ಜಗದೀಶ ಕಂಠಿ, ಜಗದೀಶ ಲಕ್ಷಟ್ರ, ಸೇರಿದಂತೆ ಹಲವರು ಭಾಗಿಯಾಗಿದ್ದರು.

### ಹಬ್ಬದ ದಿನದಂದು ದೇವಸ್ಥಾನಗಳಿಗೆ ಭಗವಾಧ್ವಜ

ರವಿವಾರ ಬೆಳಿಗ್ಗೆ ಎಲ್ಲ ಮುಖಂಡರು ಪಟ್ಟಣದ 40ಕ್ಕೂ ಹೆಚ್ಚು ದೇವಸ್ಥಾನಗಳಿಗೆ ಭೇಟಿ ನೀಡಿ ಯುಗಾದಿ ಹಬ್ಬದ ದಿನದಂದು ಎಲ್ಲ ದೇವಸ್ಥಾಗಳ ಮೇಲೆ ಭಗವಾಧ್ವಜವನ್ನ ಹಾರಿಸುವಂತೆ ಮತ್ತು ವಿಶೇಷ ಪೂಜೆಯನ್ನು ನೆರವೇರಿಸುವಂತೆ ದೇವಸ್ಥಾನದ ಅರ್ಚಕರುಗಳಿಗೆ ತಿಳಿಸಿದರು.

## ಮುದ್ದೇಬಿಹಾಳದಲ್ಲಿ 'ಯುವ ಅಧಿವೇಶನ': ಖಾಲಿ ಹುದ್ದೆಗಳ ಭರ್ತಿಗೆ ಸರಕಾರಕ್ಕೆ ಆಗ್ರಹಿಸಿ ತಹಶಿಲ್ದಾರರ ಮನವಿ




ಮುದ್ದೇಬಿಹಾಳ: ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿ ಉಳಿದಿರುವುದು ಯುವಜನತೆಯ ಭವಿಷ್ಯಕ್ಕೆ ಮಾರಕವಾಗಿದೆ. ಕೂಡಲೇ ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕು ಹಾಗೂ ಪಾರದರ್ಶಕತೆ ಕಾಪಾಡಬೇಕು ಎಂದು ಆಗ್ರಹಿಸಿ ಸೋಮವಾರ ಪಟ್ಟಣದ ತಹಶೀಲ್ದಾರ್ ಕಚೇರಿ ಎದುರು 'ಜನಸಾಮಾನ್ಯರ ವೇದಿಕೆ' ವತಿಯಿಂದ 'ಯುವ ಅಧಿವೇಶನ' ನಡೆಸಲಾಯಿತು.

ವಿವಿಧ ಭಾಗಗಳಿಂದ ಆಗಮಿಸಿದ್ದ ನೂರಾರು ಉದ್ಯೋಗಾಕಾಂಕ್ಷಿಗಳು ಹಾಗೂ ಚಿಂತಕರು ಅಧಿವೇಶನದಲ್ಲಿ ಪಾಲ್ಗೊಂಡು, ನೇಮಕಾತಿ ವಿಳಂಬ ಮತ್ತು ಪರೀಕ್ಷಾ ವ್ಯವಸ್ಥೆಯಲ್ಲಿನ ಅಸಮರ್ಪಕತೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ತಹಶೀಲ್ದಾರ್ ಶ್ರೀಮತಿ ಕೀರ್ತಿ ಚಾಲಕ್ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಹಕ್ಕೊತ್ತಾಯದ ಮನವಿ ಪತ್ರ ಸಲ್ಲಿಸಿದರು.

**ಲಕ್ಷಾಂತರ ಹುದ್ದೆಗಳು ಖಾಲಿ:**

ಅಧಿವೇಶನದ ಅಧ್ಯಕ್ಷತೆ ವಹಿಸಿದ್ದ ನ್ಯಾಯವಾದಿ ಪಿ.ಬಿ. ಮಾತಿನ ಹಾಗೂ ಮುಖಂಡರಾದ ಪಿ.ಬಿ. ಗೌಡರ ಮತ್ತು ಯಲ್ಲಪ್ಪ ಹೆಗಡೆ ಮಾತನಾಡಿ, "ರಾಜ್ಯದಲ್ಲಿ 2.84 ಲಕ್ಷ ಹಾಗೂ ಕೇಂದ್ರದಲ್ಲಿ 9.64 ಲಕ್ಷ ಹುದ್ದೆಗಳು ದೀರ್ಘಕಾಲದಿಂದ ಖಾಲಿ ಇರುವುದು ಆತಂಕಕಾರಿ. ಸರ್ಕಾರಗಳು ಉದ್ಯೋಗ ನೀಡುವಲ್ಲಿ ವಿಳಂಬ ಮಾಡುತ್ತಿರುವುದರಿಂದ ಸಾವಿರಾರು ಯುವಕರು ವಯೋಮಿತಿ ಮೀರುವ ಭೀತಿ ಎದುರಿಸುತ್ತಿದ್ದಾರೆ. ಪರೀಕ್ಷಾ ಅಕ್ರಮಗಳು ಅಭ್ಯರ್ಥಿಗಳ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿವೆ" ಎಂದು ಆಕ್ರೋಶ ಹೊರಹಾಕಿದರು.

**ಪ್ರಮುಖ ಬೇಡಿಕೆಗಳು:**

**ವಾರ್ಷಿಕ ವೇಳಾಪಟ್ಟಿ:** KPSC, KEA, KSP ಸೇರಿದಂತೆ ಎಲ್ಲಾ ನೇಮಕಾತಿ ಪ್ರಾಧಿಕಾರಗಳು ಪ್ರತಿವರ್ಷ ಕಡ್ಡಾಯವಾಗಿ ವಾರ್ಷಿಕ ಪರೀಕ್ಷಾ ಕ್ಯಾಲೆಂಡರ್ ಪ್ರಕಟಿಸಬೇಕು.

**ಕನ್ನಡದಲ್ಲಿ ಪರೀಕ್ಷೆ:** ಕೇಂದ್ರ ಸರ್ಕಾರದ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕನ್ನಡ ಭಾಷೆಯಲ್ಲಿಯೂ ನಡೆಸಲು ತಕ್ಷಣ ಕ್ರಮ ಕೈಗೊಳ್ಳಬೇಕು.

**ಶುಲ್ಕ ರದ್ದತಿ:** ಉದ್ಯೋಗಾಕಾಂಕ್ಷಿಗಳಿಗೆ ಹೊರೆಯಾಗುತ್ತಿರುವ ದುಬಾರಿ ಅರ್ಜಿ ಶುಲ್ಕವನ್ನು ಸಂಪೂರ್ಣವಾಗಿ ರದ್ದುಗೊಳಿಸಬೇಕು.

KPSC **ಪುನರ್‌ರಚನೆ:** ರಾಜ್ಯದ ನೇಮಕಾತಿ ವ್ಯವಸ್ಥೆಯನ್ನು ಬಲಪಡಿಸಲು ಕೇಂದ್ರದ ಮಾದರಿಯಲ್ಲಿ ಏಕಖಅಯನ್ನು ಸಮಗ್ರವಾಗಿ ಪುನರ್‌ರಚಿಸಬೇಕು.

ಪರೀಕ್ಷಾ ಅಕ್ರಮಗಳಿಗೆ ಕಟ್ಟುನಿಟ್ಟಿನ ಕಡಿವಾಣ ಹಾಕಬೇಕು. ಸರ್ಕಾರ ಯುವಕರ ಈ ನ್ಯಾಯಯುತ ಬೇಡಿಕೆಗಳಿಗೆ ತಕ್ಷಣ ಸ್ಪಂದಿಸದಿದ್ದರೆ ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಹೋರಾಟವನ್ನು ತೀವ್ರಗೊಳಿಸುವುದಾಗಿ ಪ್ರತಿಭಟನಾಕಾರರು ಎಚ್ಚರಿಸಿದರು.

ಅಧಿವೇಶನದಲ್ಲಿ ಉದ್ಯೋಗಾಕಾಂಕ್ಷಿಗಳಾದ ಅನೀಲ ವಾಲಿಕಾರ, ಮುತ್ತಣ್ಣ ಒಡ್ಡೋಡಗಿ, ಮುತ್ತು ಕನ್ನೂರ, ಜುಮ್ಮಣ್ಣ ಹೊಕ್ರಾಣಿ, ಬಸವರಾಜ ಹುಲಗಣ್ಣಿ, ಸಿದ್ದು ವಾಲಿಕಾರ, ಸೀತಪ್ಪ ಗಣಿ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಮತ್ತು ಯುವಕರು ಪಾಲ್ಗೊಂಡಿದ್ದರು.

## ಆಲಿಕಲ್ಲು ಮಳೆಗೆ ಕಾಶ್ಮೀರದಂತಾದ ಕಲಘಟಗಿ

ಹುಬ್ಬಳ್ಳಿ: ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಸುತ್ತ ಮುತ್ತಲಿನ ಪ್ರದೇಶದಲ್ಲಿ ಮಂಗಳವಾರ ಭಾರಿ ಆಲಿಕಲ್ಲು ಮಳೆಯಾದ ಪರಿಣಾಮ ಇಡೀ ಕಲಘಟಗಿ ಗ್ರಾಮದಲ್ಲಿ ಆಲಿಕಲ್ಲುಗಳ ರಾಶಿ ಬಿದ್ದು, ಇದು ಕಲಘಟಗಿಯೋ, ಕಾಶ್ಮೀರವೋ ಎಂಬ ಜಿಜ್ಞಾಸೆಗೆ ಎಡೆ ಮಾಡಿಕೊಟ್ಟಿತ್ತು.

ಕಲಘಟಗಿ ಗ್ರಾಮದ ಸುತ್ತ ಸುರಿದ ಮಳೆಯ ಜೊತೆಗೆ ಭಾರೀ ಪ್ರಮಾಣದಲ್ಲಿ ಆಲಿಕಲ್ಲುಗಳು ಬಿದ್ದಿದ್ದು, ರಸ್ತೆ, ಮನೆ ಸೇರಿದಂತೆ ಗಿಡ ಗಂಟೆಗಳೆಲ್ಲ ಅಕ್ಷರಶಃ ಮಂಜುಗಡ್ಡೆ ಆವರಿಸಿತ್ತು. ಸತತ ಮಂಜು ಸುರಿಯುವ ಪ್ರದೇಶದಂತೆ ಕಲಘಟಗಿಯ ಚಿತ್ರಣ ಬದಲಾಗಿತ್ತು. ರಸ್ತೆ, ಮನೆಗಳ ಮೇಲೆ ಬಿದ್ದಿದ್ದ ಆಲಿಕಲ್ಲುಗಳನ್ನು ತೆರವುಗೊಳಿಸಲು ಜನ ಹರಸಾಹಸ ಪಟ್ಟರು.

ಹಿಮಾಲಯದಲ್ಲಿ ಬೀಳುವ ಮಂಜಿನಂತೆಯೇ ಆಲಿಕಲ್ಲುಗಳು ಬಿದ್ದಿದ್ದವು. ಆರಂಭದಲ್ಲಿ ಆಲಿಕಲ್ಲುಗಳನ್ನು ನೋಡಿದ ಜನ ಕೇಕೆ ಹಾಕಿ ಸಂಭ್ರಮಿಸಿದ್ದರು. ನಂತರದಲ್ಲಿ ಆಲಿಕಲ್ಲು ಪ್ರಮಾಣ ಹೆಚ್ಚಾದಂತೆ ಜನ ಆತಂಕಗೊಂಡರು. ಅಲ್ಲದೇ, ಈ ಪ್ರಮಾಣದ ಆಲಿಕಲ್ಲು ಬಿದ್ದ ಚಿತ್ರಣ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದಂತೆ ಇಡೀ ಧಾರವಾಡ ಜಿಲ್ಲೆಯ ಜನ ಕುತೂಹಲದಿಂದ ವೀಡಿಯೋ ತುಣಿಕುಗಳನ್ನು ವೀಕ್ಷಿಸಿ ಬೆರಗಾದರು.



# ಹದಿಹರೆಯದವರನ್ನು ಕಾಡುವ ರಕ್ತಸ್ರಾವ

ವನಜಾ ೯ನೆಯ ತರಗತಿಯಲ್ಲಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ. ಕ್ಲಾಸಿನಲ್ಲಿ ತಲೆ ಸುತ್ತಿ ಬಿದ್ದಳೆಂದು ಶಿಕ್ಷಕಿಯೋರ್ವರು ಹೊರರೋಗಿ ವಿಭಾಗಕ್ಕೆ ಕರೆತಂದಿದ್ದರು. ಸಮವಸ್ತ್ರದಲ್ಲಿ ಬಂದಿದ್ದರಿಂದ ತಕ್ಷಣವೇ ಅವಳನ್ನು ಪರೀಕ್ಷಿಸುವಾಗ ಗೊತ್ತಾಗಿದ್ದು ಕಳೆದ ಹದಿಮೂರು ದಿನಗಳ ಹಿಂದೆ ಮಾಸಿಕ ಋತುಸ್ರಾವ ಪ್ರಾರಂಭವಾಗಿದ್ದು ನಿಂತೇ ಇರಲಿಲ್ಲ ಎನ್ನುವುದು. ಮುಖ ಮೈ ಎಲ್ಲ ಬಿಳಚಿಕೊಂಡು ತೀರಾ ನಿಶ್ಯಕ್ತಗೊಂಡಿದ್ದಳು.

ಸಂಕೋಚದಿಂದ ಮನೆಯಲ್ಲೂ ಹೇಳದೇ, ಶಿಕ್ಷಕರಿಗೂ ತಿಳಿಸದೇ, ಸುಮ್ಮನಿದ್ದು ಅತಿಸ್ರಾವವಾಗಿ ರಕ್ತಹೀನತೆಯಿಂದ ಬಳಲುತ್ತಿದ್ದ ಸ್ಥಿತಿಯಲ್ಲಿ ಶಾಲೆಯಿಂದ ಶಿಕ್ಷಕಿ ಕರೆತಂದಿದ್ದರು. ಋತುಸ್ರಾವವನ್ನು ಕಡಿಮೆ ಮಾಡುವ ಚುಚ್ಚುಮದ್ದು ಕೊಟ್ಟು ಅವಳ ಹಿಮೋಗ್ಲೋಬಿನ್ ಪರೀಕ್ಷೆ ಮಾಡಿಸಿದಾಗ ಅವಳ ಹಿಮೋಗ್ಲೋಬಿನ್ ೫ ಮಿ.ಗ್ರಾಂ. ನಷ್ಟಿತ್ತು. ಹತ್ತಿರದ ಹಳ್ಳಿಯಲ್ಲಿದ್ದ ಅವರ ಪೋಷಕರನ್ನು ಕರೆಸಿ ವಿವರವಾಗಿ ಅವಳಿಗಾಗುತ್ತಿರುವ ಅತಿರಕ್ತಸ್ರಾವದ ಬಗ್ಗೆ ತಿಳಿಸಿ ೩-೪ ಬಾಟಲಿ ಸೂಕ್ತ ರಕ್ತವನ್ನು ಪೂರೈಕೆ ಮಾಡಿ, ಸೂಕ್ತ ಔಷಧಿಯನ್ನು ಕೊಡಲಾಯಿತು. ಒಂದೇ ವಾರಕ್ಕೆ ಮತ್ತೆ ಶಾಲೆಗೆ ಹೋಗುವ ಹಾಗೆ ಆದಳು.

ಏನಿದು, ಆಡಿ ಕುಣಿದು ಕುಪ್ಪಳಿಸುವ ಬಾಲೆಯರಲ್ಲೂ ಹೀಗೆ ರಕ್ತಸ್ರಾವವಾಗಬಹುದೇ? ನಾವೇನು ಮುಟ್ಟು ನಿಲ್ಲುವ ಸಮಯದಲ್ಲಷ್ಟೇ ಇಂತಹ ತೊಂದರೆಗೊಳಗಾಗಬಹುದೆಂದು ಅಂದುಕೊಂಡಿದ್ದೆವು ಎಂದು ಶಿಕ್ಷಕಿಯ ಅಳಲಾದರೆ, ಹಲವು ಅತಿರಕ್ತಸ್ರಾವದಿಂದ ಬಳಲುವ ಹೆಣ್ಣು ಮಕ್ಕಳ ತಾಯಂದಿರು ಮೇಡಂ ನಮಗಂತೂ ಈ ಬಟ್ಟೆ ಒಗೆದು ಒಗೆದು ಸಾಕಾಗಿಬಿಟ್ಟಿದೆ.

ತೊಡೆಸಂದಿಯೂ ಸೆಲೆತು ಹೋಗಿದೆ. ಏನಿದು ಓಡಾಡಕ್ಕೂ ಕಷ್ಟ ಆಗ್ತಿದೆ ಎಂದು ಅವಲತ್ತುಕೊಳ್ಳುತ್ತಾರೆ. ಹೀಗೆ ಹರೆಯಕ್ಕೆ ಪಾದಾರ್ಪಣೆ ಮಾಡಿದ ಕೆಲವು ಹೆಣ್ಣು ಮಕ್ಕಳಲ್ಲಿ ೧೯ ವರ್ಷದೊಳಗಾಗಿ ಅತಿಯಾದ ರಕ್ತಸ್ರಾವ ಆಗಿ ಅವರ ದೈನಂದಿನ ಚಟುವಟಿಕೆಗಳಿಗೂ ತೊಂದರೆಯಾಗಿ ಶೈಕ್ಷಣಿಕವಾಗಿಯೂ ಏರುಪೇರಾಗಬಹುದು.

ಬಾಲ್ಯಾವಸ್ಥೆಯಿಂದ ಯೌವನಾವಸ್ಥೆಗೆ ಕಾಲಿಡುವ ಸಂಕ್ರಮಣ ಸ್ಥಿತಿಯಲ್ಲಿ ಹಲವು ದೈಹಿಕ, ಮಾನಸಿಕ, ಭಾವನಾತ್ಮಕ ಬದಲಾವಣೆಗಳು ಕಾಣಿಸಿಕೊಳ್ಳುವುದರ ಜೊತೆಗೆ ಈ ಋತು ಚಕ್ರದ ತೊಂದರೆಯಿಂದಾಗಿ ಆರೋಗ್ಯದ ಏರುಪೇರನ್ನು ಎದುರಿಸಲು ಬಹಳ ಹೆಣಗಾಡಬೇಕಾಗುತ್ತದೆ. ಇದು ರೋಗಿಗೂ ಹಾಗೂ ಪಾಲಕರಿಗೂ ಯಾತನೆ ಹಾಗೂ ಆತಂಕದ ಸನ್ನಿವೇಶವನ್ನೂ ಉಂಟು ಮಾಡಬಹುದು. ಆದ್ದರಿಂದ ಈ ಬಗ್ಗೆ ಸಂಪೂರ್ಣವಾಗಿ ಪಾಲಕರಿಗೆ ಹಾಗೂ ಪೋಷಕರಿಗೂ ಹಾಗೂ ಸ್ವತಃ ಹರೆಯದ ಹೆಣ್ಣು ಮಕ್ಕಳಿಗೂ, ಶಿಕ್ಷಕರಿಗೂ ಈ ಬಗ್ಗೆ ಸೂಕ್ತ ಮಾಹಿತಿ ಇರಬೇಕಾದುದು ಮುಖ್ಯ.

ಹೆಣ್ಣುಮಕ್ಕಳು ಹರೆಯಕ್ಕೆ ಪಾದಾರ್ಪಣೆ ಮಾಡುತ್ತಿದ್ದ ಹಾಗೆ ಮೆದುಳಿನ ಹೈಪೋಥಲಾಮಸ್‌ನಿಂದ ನಿರ್ದೇಶಿತವಾಗಿ ಪಿಟ್ಯೂಟರಿ ಗ್ರಂಥಿಯಿಂದ ಎಫ್.ಎಸ್.ಎಚ್. ಮತ್ತು ಎಲ್.ಎಚ್. (ಈ.ಖ.ಊ. & ಐ.ಊ.) ಹಾರ್ಮೋನುಗಳು ಲಯಬದ್ಧ ಪ್ರಮಾಣದಲ್ಲಿ ಉತ್ಪಾದನೆಯಾಗಿ ಮೊದಲ ೧೫ ದಿನಗಳು ಅಂಡಾಶಯಗಳು ಉತ್ತೇಜನಗೊಂಡು ಕೋಶಿಕೆಯಿಂದ ಒಂದೇ ಒಂದು ಅಂಡಾಣು ಪಕ್ವವಾಗಿ ಹೊರಬರುತ್ತದೆ. ಇದನ್ನು ಅಂಡೋತ್ಪತ್ತಿ ಎನ್ನುತ್ತೇವೆ (ಓವಿಲೇಷನ್).

ಅಂಡೋತ್ಪತ್ತಿಯ ನಂತರ ಕೋಶಿಕೆಯು ಕಾರ್ಪಸ್ ಲುಟಿಯಮ್ ಆಗಿ ಪರಿವರ್ತನೆ ಹೊಂದಿ ಅದರಿಂದ ಪ್ರೊಜೆಸ್ಟ್ರಾನ್ ಹಾರ್ಮೋನು ಉತ್ಪತ್ತಿ ಆಗುತ್ತದೆ. ಈ ಸಮಯದಲ್ಲಿ ಗರ್ಭಕೋಶದ ಲೋಳೆಪದರವು ಬೆಳೆಯುತ್ತಿದ್ದು ಅಂಡಾಣು ಮತ್ತು ವೀರ್ಯಾಣುಗಳ ಸಮಾಗಮವಾದಲ್ಲಿ ಭ್ರೂಣಾಗಮನವಾಗಿ ಬರಬಹುದೆಂದು ಗರ್ಭಕೋಶದಲ್ಲಿ ಮೆತ್ತನೆಯ ಹಾಸಿಗೆಯನ್ನು ತಯಾರು ಮಾಡಿರುತ್ತದೆ. ಆದರೆ ಅಂಡ ಹಾಗೂ ವೀರ್ಯಾಣು ಫಲಿತವಾಗದಿದ್ದಲ್ಲಿ ಅಂಡಾಣು ೪೮ ಗಂಟೆಗಳಲ್ಲಿ ಸತ್ತು ಹೋಗುತ್ತದೆ; ಹಾಗೂ ಗರ್ಭಕೋಶದ ಒಳಪದರವು ಭ್ರೂಣಾಗಮನವಾಗದಿದ್ದಾಗ ಹಾರ್ಮೋನುಗಳ ಮಟ್ಟ ಕಡಿಮೆಯಾಗಿ ಚೂರು ಚೂರಾಗಿ ಹೊರಬರುವ ಪ್ರಕ್ರಿಯೆಯೆ ಮಾಸಿಕ ಋತುಚಕ್ರ ಎನಿಸಿಕೊಳ್ಳುತ್ತದೆ. ಈ ಬಗ್ಗೆ ಪ್ರತಿಯೊಬ್ಬರೂ ತಿಳಿದಿರಬೇಕು.

ಹೆಚ್ಚಿನ ಸಂದರ್ಭಗಳಲ್ಲಿ ಅಂಡರಹಿತ ಋತುಚಕ್ರವೇ ಹರೆಯದವರ ಅತಿರಕ್ತಸ್ರಾವಕ್ಕೆ ಕಾರಣ. ಏಕೆಂದರೆ ಹದಿವಯಸ್ಸಿನಲ್ಲಿ ಹೈಪೋಥಲಾಮಸ್-ಪಿಟ್ಯೂಟರಿ ಗ್ರಂಥಿ-ಅಂಡಾಶಯದ ಅಕ್ಷವೂ ಪರಿಪಕ್ವವಾಗದೇ ಹಾರ್ಮೋನುಗಳ ಬಿಡುಗಡೆಯು ಲಯಬದ್ಧವಾಗಿ ಆಗುವುದಿಲ್ಲ. ಅದರಲ್ಲಿಯೂ ಎಲ್.ಎಚ್. ಹಾರ್ಮೋನ್ ಹಗಲಿನಲ್ಲಿಯೂ ಲಯಬದ್ಧವಾಗಿ ಬಿಡುಗಡೆಯಾದಾಗ ಅಂಡೋತ್ಪತ್ತಿಯ ಸಹಿತವಾದ ಋತುಚಕ್ರವಾಗುತ್ತದೆ.

ಇಲ್ಲದಿದ್ದಲ್ಲಿ ಅಂಡರಹಿತವಾದ ಋತುಚಕ್ರವಾಗಿ ಕೇವಲ ಇಸ್ಟ್ರೋಜನ್ ಹಾರ್ಮೋನು ಮಾತ್ರ ಹೆಚ್ಚಿದ್ದು ಅಂಡೋತ್ಪತ್ತಿಯಾಗುವಷ್ಟು ಎಲ್.ಎಚ್. ಹಾರ್ಮೋನು ಇಲ್ಲದಿದ್ದಾಗ ಪ್ರೊಜೆಸ್ಟ್ರನ್ ಹಾರ್ಮೋನು ಉತ್ಪಾದನೆಯಾಗದೇ ಕೇವಲ ಇಸ್ಟ್ರೋಜನ್‌ನಿಂದ ಗರ್ಭಕೋಶದ ಲೋಳೆಪದರ ಅಧಿಕವಾಗಿ ಬೆಳೆದು ಒಂದು ಹಂತವನ್ನು ಮೀರಿ ಬೆಳೆದಾಗ ರಕ್ತಸರಬರಾಜು ನಿಂತುಹೋಗಿ, ಒಳಪದರ ಚೂರು ಚೂರಾಗಿ ಸ್ರಾವದ ರೂಪದಲ್ಲಿ ಹೊರಬಂದು ಅತಿ ರಕ್ತಸ್ರಾವ ಎನಿಸಿಕೊಳ್ಳುತ್ತದೆ.

ಜೊತೆಗೆ ಸ್ಥಳೀಯವಾಗಿ ಉತ್ಪಾದನೆಯಾಗುವ ಹಾರ್ಮೋನುಗಳ ಮಟ್ಟದಲ್ಲಿಯೂ ಏರುಪೇರಾಗಿ ಅಧಿಕ ರಕ್ತಸ್ರಾವವಾಗುತ್ತದೆ. ಆದ್ದರಿಂದ ಈ ಸಂದರ್ಭಗಳಲ್ಲಿ ಮೊದಲು ರೋಗಿಗೆ ಹಾಗೂ ಪಾಲಕರಿಗೆ ಭರವಸೆ ನೀಡುವುದು ಮುಖ್ಯ. ಮೊದಲು ರಕ್ತಸ್ರಾವವನ್ನು ತಡೆಗಟ್ಟುವ ಸೂಕ್ತ ಔಷಧಿಗಳನ್ನು ಕೊಟ್ಟು (ಮೆಫನೆಮಿಕ್ ಆಸಿಡ್ ಮತ್ತು ಟ್ರಾನೆಕ್ಸೆಮಿಕ್ ಆಸಿಡ್) ನಂತರ ೩-೬ ತಿಂಗಳು ಪ್ರೊಜೆಸ್ಟ್ರಾನ್ ಹಾಗೂ ಇಸ್ಟ್ರೋಜನ್ ಹಾರ್ಮೋನುಗಳ ಮಾತ್ರೆಗಳನ್ನು ಕೊಡಬೇಕಾಗುತ್ತದೆ.

ಒದರೊಂದಿಗೆ ಸೂಕ್ತ ರಕ್ತಪರೀಕ್ಷೆಗಳನ್ನು ಪೆಲ್ವಿಕ್ ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ಇತ್ಯಾದಿ ಅವಶ್ಯವಿದ್ದರೆ ಮಾಡಿಸಬೇಕಾಗುತ್ತದೆ. ಪಿಸಿಓಡಿ ಸಮಸ್ಯೆ ಇದ್ದರೂ ಸೂಕ್ತ ಹಾರ್ಮೋನು ಚಿಕಿತ್ಸೆ ಕೊಡಬೇಕಾಗುತ್ತದೆ. ಥೈರಾಯಿಡ್ ಹಾರ್ಮೋನು ಕಡಿಮೆ ಇದ್ದಾಗ ಥೈರಾಯಿಡ್ ಹಾರ್ಮೋನು ಚಿಕಿತ್ಸೆ ಕೊಡಬೇಕಾಗುತ್ತದೆ.

ಒಟ್ಟಾರೆ ಹಲವು ಬದಲಾವಣೆಗಳು ಆಗುವ ಹರೆಯದ ಡೋಲಾಯಮಾನ ಸ್ಥಿತಿಯಲ್ಲಿ ಋತುಚಕ್ರದ ಬಗೆಗೂ ಸಾಕಷ್ಟು ಪ್ರಚಲಿತವಿರುವ ಸಂಪ್ರದಾಯ ಹಾಗೂ ಮೂಢನಂಬಿಕೆ, ತಪ್ಪು ಕಲ್ಪನೆಗಳಿರುವ ಇಂದಿನ ಕಾಲಘಟ್ಟದಲ್ಲಿ ಹರೆಯದವರ ಮನವೊಲಿಸಿ ಮುಜುಗರವಾಗದ ಹಾಗೇ ಅವರ ಚರಿತೆಯನ್ನು ತೆಗೆದುಕೊಂಡು ಸೂಕ್ತ ಚಿಕಿತ್ಸೆ ನೀಡಬೇಕಾಗುತ್ತದೆ.

ಹೆಣ್ಣುಮಕ್ಕಳ ಪೋಷಕರು, ಪಾಲಕರು ಮತ್ತು ಶಿಕ್ಷಕರು ಈ ಮಾಹಿತಿಯನ್ನು ತಿಳಿದುಕೊಂಡಿರಬೇಕು. ಹೆಣ್ಣುಮಕ್ಕಳು ಅತಿರಕ್ತಹೀನತೆಯಿಂದಾಗಿ ತೊಂದರೆಯಾಗುವುದನ್ನು ತಪ್ಪಿಸಲು ಆರಂಭದಲ್ಲಿಯೇ ವಿಷಯವನ್ನು ಮುಚ್ಚಿಡದೇ, ಆಪ್ತರೊಂದಿಗೆ ಚರ್ಚಿಸಿ, ವೈದ್ಯರಿಂದ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬೇಕು. ಹದಿಹರೆಯದಲ್ಲಿ ಸೂಕ್ತ ಪೌಷ್ಟಿಕ ಆಹಾರ ಸೇವನೆ ಹಾಗೂ ನಿಯಮಿತ ದೈಹಿಕ ಚಟುವಟಿಕೆಯಿಂದ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಅತ್ಯಗತ್ಯ.

ಹರೆಯದಲ್ಲಿ ಅಧಿಕ ರಕ್ತಸ್ರಾವಕ್ಕೆ ಕಾರಣಗಳೇನು?

ಮಾಸಿಕ ಋತುಚಕ್ರ ತಿಂಗಳಿಗೊಮ್ಮೆ ಬಂದು ಪ್ರತಿ ತಿಂಗಳು ೬೦-೮೦ ಎಂ.ಎಲ್. ನಷ್ಟು (೩-೪ ಚಮಚದಷ್ಟು) ರಕ್ತಸ್ರಾವವಾಗಬಹುದು, ಇದು ಸಹಜ. ಆದರೆ ಕೆಲವರಲ್ಲಿ ಮೇಲೆ ತಿಳಿಸಿದ ಘಟನೆಯಂತಹ ಅತಿಯಾದ ರಕ್ತಸ್ರಾವವಾಗುತ್ತದೆ. ಇದಕ್ಕೆ ಮುಖ್ಯ ಕಾರಣ ಶೇ.೭೦ರಷ್ಟರಲ್ಲಿ ಅಂಡರಹಿತ ಋತುಚಕ್ರಗಳು. ಇನ್ನೂ ಕೆಲವರಲ್ಲಿ ಪಿಸಿಓಡಿ ಸಮಸ್ಯೆಗಳಿಂದ, ಕೆಲವರಲ್ಲಿ ಥೈರಾಯಿಡ್ ಸ್ರಾವ ಕಡಿಮೆಯಾಗುವುದರಿಂದ ಇನ್ನು ಕೆಲವರಲ್ಲಿ ರಕ್ತಹೆಪ್ಪುಗಟ್ಟುವಿಕೆಯ ತೊಂದರೆಗಳಾದ ಐ.ಟಿ.ಪಿ. ಇತ್ಯಾದಿಗಳಿಂದ ಅತಿರಕ್ತಸ್ರಾವವಾಗಬಹುದು.

ಇನ್ನೂ ಕೆಲವರಲ್ಲಿ ಅಪರೂಪಕ್ಕೆ ಗರ್ಭಕೋಶದ ಶಾರೀರಿಕ ರಚನೆಯಲ್ಲಿ ವ್ಯತ್ಯಾಸದಿಂದ ಹಾಗೂ ಯಕೃತ್ ಮೂತ್ರಪಿಂಡದ ತೊಂದರೆಯಿಂದ, ಮತ್ತು ಕೆಲವೊಮ್ಮೆ ಅಪಘಾತದಿಂದ ಜನನಾಂಗಕ್ಕೆ ಆಗುವ ಗಾಯಗಳಿಂದ, ಸೋಂಕು ಇತ್ಯಾದಿಗಳಿಂದ ಅತಿರಕ್ತಸ್ರಾವವಾಗಬಹುದು. ಕೆಲವು ಹೆಣ್ಣುಮಕ್ಕಳು ಮದುವೆಗೂ ಮೊದಲು ಗರ್ಭಧಾರಣೆಯಾಗಿ ಸ್ವಯಂ ಗರ್ಭಪಾತ ಮಾತ್ರೆಗಳನ್ನು ತೆಗೆದುಕೊಂಡು ಅರ್ಧಂಬರ್ಧ ಗರ್ಭಪಾತವಾಗಿ ಬಹಳಷ್ಟು ದಿನ ರಕ್ತಸ್ರಾವವಾಗಬಹುದಾದ ಸಾಧ್ಯತೆಯನ್ನೂ ಅಲ್ಲಗಳೆಯಲಾಗುವುದಿಲ್ಲ. ಆದ್ದರಿಂದ ರೋಗಿಯ ಮನವೊಲಿಸಿ ಇವೆಲ್ಲವುಗಳ ಸೂಕ್ತವಾದ ಚರಿತ್ರೆ ತೆಗೆದುಕೊಂಡು ಸೂಕ್ತ ದೈಹಿಕ ತಪಾಸಣೆ ನಡೆಸಿ ಅಗತ್ಯ ಲ್ಯಾಬ್ ಪರೀಕ್ಷೆಗಳನ್ನು ನಡೆಸಿ, ಅತಿ ರಕ್ತಸ್ರಾವಕ್ಕೆ ಕಾರಣಗಳನ್ನು ಕಂಡುಹಿಡಿಯಬೇಕು.

ಅನಂತರ ರೋಗಿ ಹಾಗೂ ತಂದೆ-ತಾಯಿಯರೊಂದಿಗೆ ಆಪ್ತ ಸಮಾಲೋಚನೆ ನಡೆಸಿ ನಿರ್ದಿಷ್ಟ ಕಾರಣ ಹಾಗೂ ಚಿಕಿತ್ಸೆಯ ಬಗ್ಗೆ ಮನದಟ್ಟು ಮಾಡಿಸಬೇಕು. ಎಷ್ಟು ರಕ್ತಹೀನತೆ ಉಂಟಾಗಿದೆ? ದುಗ್ಧ ರಸಗ್ರಂಧಿಗಳು ದೊಡ್ಡದಾಗಿದೆಯೆ? ವಸಡಿನಲ್ಲಿ ಸ್ರಾವವಿದೆಯೆ? ನಾಡಿ ಹಾಗೂ ರಕ್ತದೊತ್ತಡ ಪರೀಕ್ಷೆ, ಯಕೃತ್ ಹಾಗೂ ಗುಲ್ಮ ದೊಡ್ಡದಾಗಿದೆಯೇ? ಮೈ ಮೇಲೆ ಅನವಶ್ಯಕ ರೋಮಗಳಿವೆಯೆ? ಚರ್ಮದ ಮೇಲೆ ಕೆಂಪು ಗುಳ್ಳೆಗಳಿವೆಯೆ? ? ಎಂದು ತಪಾಸಣೆ ಮಾಡಬೇಕು.



# ಪೌರ ಕಾರ್ಮಿಕರಿಗೆ ಸಮರ್ಪಕ ಸುರಕ್ಷತಾ ಪರಿಕರ ವಿತರಿಸಿ




ವಿಜಯಪುರ: ಪೌರ ಕಾರ್ಮಿಕ ವೇತನ ವಿಳಂಬ ಮಾಡದೆ ನಿಗದಿತ ಅವಧಿಯಲ್ಲಿ ಪಾವತಿಸುವಂತೆ ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ ಅಧಿಕಾರಿಗಳಿಗೆ ಸೂಚಿಸಿದರು.

ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ನಗರಾಭಿವೃದ್ಧಿ ಕೋಶ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮ್ಯಾನುಯಲ್ ಸ್ಕೆವೆಂಜರ್ಸ್ ನೇಮಕಾತಿ ನಿಷೇಧ ಮತ್ತು ಪುನರ್ವಸತಿ ಅಧಿನಿಯಮ 2013 ಜಿಲ್ಲಾ ಮಟ್ಟದ 3ನೇ ತ್ರೈಮಾಸಿಕ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹೊರಗುತ್ತಿಗೆ ಆಧಾರ ಮೇಲೆ ನಗರ ಸ್ಥಳೀಯ ಸಂಸ್ಥೆ ಹಾಗೂ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರು, ಸಫಾಯಿ ಕರ್ಮಚಾರಿ, ಪೌರ ಕಾರ್ಮಿಕರಿಗೆ ಕನಿಷ್ಠ ವೇತನದಡಿ ಇ.ಎಸ್.ಐ ಇ.ಪಿ.ಎಫ್ ಕಟಾವು ಮತ್ತು ವಿಮಾ ಕಂತಿನ ಸಮಗ್ರ ಮಾಹಿತಿಯನ್ನು ಕಾಲ ಕಾಲಕ್ಕೆ ಮಾಹಿತಿ ನೀಡಬೇಕು ಎಂದರು.

ಕಾರ್ಮಿಕರ ಆರೋಗ್ಯದ ಹಿತ ಕಾಪಾಡುವ ನಿಟ್ಟಿನಲ್ಲಿ ಮೇಲಿಂದ ಮೇಲೆ ಆರೋಗ್ಯ ಶಿಬಿರಗಳನ್ನು ಏರ್ಪಡಿಸಬೇಕು. ಅವರಿಗೆ ಸುರಕ್ಷಿತ ಪರಿಕರಗಳನ್ನು ಸಮರ್ಪಕವಾಗಿ ವಿತರಿಸಲು ಕ್ರಮ ವಹಿಸಬೇಕು. ಪೌರ ಕಾರ್ಮಿಕರ ಗೃಹಭಾಗ್ಯ ಯೋಜನೆಯಡಿ ವಸತಿ ಸೌಲಭ್ಯ ಪಡೆದುಕೊಂಡಿರುವ ಫಲಾನುಭವಿಗಳ ಹಾಗೂ ಇಲ್ಲಿಯವರೆಗೆ ಹಕ್ಕು ಪತ್ರಗಳನ್ನು ವಿತರಿಸಿದ ವಿವರ ಒದಗಿಸುವಂತೆ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಉದ್ಯಮಶೀಲತಾ ಅಭಿವೃದ್ಧಿ ಯೋಜನೆ, ಸ್ವಾವಲಂಬಿ ಸಾರಥಿ, ನೇರ ಸಾಲ, ಮೈಕ್ರೋಡಿಟ್ ಕಿರುಸಾಲ ಹಾಗೂ ಉಚಿತ ಲ್ಯಾಪ್ ಟಾಪ್ ಹಾಗೂ ಇತರ ಯೋಜನೆಗಳಲ್ಲಿ ಪಡೆದಿರುವ ಫಲಾನುಭವಿಗಳ ಮಾಹಿತಿ ಒದಗಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಯೋಜನಾಧಿಕಾರಿ ಸಿ.ಬಿ ಕುಂಬಾರ, ಮಹಾನಗರ ಪಾಲಿಕೆ ಉಪ ಆಯುಕ್ತ ಮಹಾವಿರ ಬೋರಣ್ಣವರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಸಂಪತ್ ಕುಮಾರ ಗುಣಾರಿ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಮಹೇಶ ಪೋತದಾರ, ನಗರಾಭಿವೃದ್ಧಿ ಯೋಜನಾಧಿಕರಿ ಬದ್ರುದ್ದೀನ ಸೌದಾಗರ, ಸಫಾಯಿ ಕರ್ಮಚಾರಿ ಸಮಿತಿಯ ನಾಮ ನಿರ್ದೇಶಿತ ಸದಸ್ಯರಾದ ದಯಾನಂದ ಅಲಿಯಾಬಾದ, ಮಹಾದೇವಿ ಹಾದಿಮನಿ, ಸೇರಿದಂತೆ ಬಬಿನಾಬಾಯಿ ನಾಗರಾಳ ಹಾಗೂ ಇತರರು ಉಪಸ್ಥಿತರಿದ್ದರು.

# ಸರಕಾರಿ ಹುದ್ದೆಗಳ ನೇಮಕಾತಿಗೆ ಆಗ್ರಹಿಸಿ ಎಬಿವಿಪಿ ಪ್ರತಿಭಟನೆ

ವಿಜಯಪುರ: ಕರ್ನಾಟಕ ರಾಜ್ಯದಲ್ಲಿ ಸರಕಾರಿ ಹುದ್ದೆಗಳ ನೇಮಕಾತಿ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಸಮಸ್ಯೆಗಳನ್ನು ಸರಿಪಡಿಸುವಂತೆ ಆಗ್ರಹಿಸಿ ನಗರದಲ್ಲಿ ಎಬಿವಿಪಿ ಕಾರ್ಯಕರ್ತರು ಮಂಗಳವಾರ ಪ್ರತಿಭಟನೆ ನಡೆಸಿದರು.

ಮನವಿ ಸ್ವೀಕರಿಸಲು ಡಿ.ಸಿ. ತಡ ಮಾಡಿದ್ದಕ್ಕೆ ಜಿಲ್ಲಾಧಿಕಾರಿಗಳ ಕಚೇರಿಗೆ ನುಗ್ಗಲು ವಿದ್ಯಾರ್ಥಿಗಳು ವಿಫಲ ಯತ್ನ ಮಾಡಿದರು.

ನಂತರ ಆಗಮಿಸಿದ ಜಿಲ್ಲಾಧಿಕಾರಿಗಳು ಮನವಿ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಎಬಿವಿಪಿಯ ಕೇಂದ್ರೀಯ ಕಾರ್ಯ ಸಮಿತಿ ಸದಸ್ಯರಾದ ಸಚಿನ ಕುಳಗೇರಿ ಮಾತನಾಡಿ, ರಾಜ್ಯದಲ್ಲಿ ಕಳೆದ 5–6 ವರ್ಷಗಳಿಂದ ವಿದ್ಯಾರ್ಥಿಗಳ ಪರಿಸ್ಥಿತಿ ಶೋಚನೀಯವಾಗಿದೆ. ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಸ್ಪಂದಿಸಿ ವಿದ್ಯಾರ್ಥಿಗಳ ಜೊತೆಗೆ ನಿಲ್ಲಬೇಕಾದ ಸರ್ಕಾರ ಕುಂಭನಿದ್ರೆಗೆ ಜಾರಿದೆ. ಸರಕಾರದ ಹತ್ತಿರ ಯಾವುದೇ ದೂರದೃಷ್ಟಿಯ ಯೋಜನೆಗಳು ಇಲ್ಲದೆ ಸಮಸ್ಯೆಗಳು ಬಂದಾಗ ಅವುಗಳಿಗೆ ತೇಪೆ ಹಚ್ಚುವ ಕಾರ್ಯ ನಡೆಯುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ಖಾಲಿ ಇರುವ ಸರ್ಕಾರಿ ಹುದ್ದೆಗಳ ನೇಮಕಾತಿಯನ್ನು ಮಾಡಿಕೊಳ್ಳುತ್ತೇವೆ ಎಂದು ಪ್ರಣಾಳಿಕೆಯಲ್ಲಿ ಅಧಿಕಾರಕ್ಕೆ ಬಂದ ಸರ್ಕಾರ, ಕಳೆದ ಮೂರು ವರ್ಷಗಳಿಂದ ಯಾವುದೇ ನೇಮಕಾತಿಗಳನ್ನು ಮಾಡದೆ ವಿದ್ಯಾರ್ಥಿಗಳಿಗೆ ಮೋಸ ಮಾಡಿದೆ. ರಾಜ್ಯದಲ್ಲಿ ಒಟ್ಟು 43 ಇಲಾಖೆಗಳಲ್ಲಿ 284, 881 ಹುದ್ದೆಗಳು ಖಾಲಿ ಇವೆ. ಲಕ್ಷಾಂತರ ಅಭ್ಯರ್ಥಿಗಳು ಕಳೆದ ಐದಾರು ವರ್ಷಗಳಿಂದ ಸರ್ಕಾರ ನೇಮಕಾತಿಗಳನ್ನು ಮಾಡುತ್ತೇವೆ ಎಂಬ ನಂಬಿಕೆಯೊಂದಿಗೆ ಪ್ರತಿ ತಿಂಗಳು ಹಣವನ್ನು ಖರ್ಚು ಮಾಡಿ ಕೊಂಡು ತರಬೇತಿಯನ್ನು ಪಡೆಯುತ್ತಾ ಸರಕಾರಿ ಸೇವೆಯನ್ನು ಮಾಡಬೇಕು ಎಂಬ ಆಸೆಯನ್ನು ಇಟ್ಟುಕೊಂಡು ಅಧ್ಯಯನ ಮಾಡುತ್ತಿದ್ದಾರೆ. ಆದರೆ ಅಂತಹ ಸಾವಿರಾರು ಅಭ್ಯರ್ಥಿಗಳ ವಯಸ್ಸು ಕೂಡಾ ಮೀರುತ್ತಿದೆ. ಆದರೆ ಸರಕಾರಕ್ಕೆ ಈ ಯಾವುದೇ ತೊಂದರೆಗಳನ್ನು ಗಮನಿಸದೆ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ ಎಂದರು.



ಎಬಿವಿಪಿಯ ಜಿಲ್ಲಾ ಸಂಚಾಲಕ ಸಂದೀಪ ಅರಳಗುಂಡಿ ಮಾತನಾಡಿ, ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತಹ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ 79,694 ಹುದ್ದೆಗಳು, ಉನ್ನತ ಶಿಕ್ಷಣ ಇಲಾಖೆಯಲ್ಲೂ 13,599 ಹುದ್ದೆಗಳು ಖಾಲಿ ಇದ್ದು, ಇದರಿಂದ ರಾಜ್ಯದ ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತದೆ. ಸರಿಯಾಗಿ ತರಗತಿಗಳು ನಡೆಯುತ್ತಿಲ್ಲ. ಸರ್ವರಿಗೂ ಶಿಕ್ಷಣವನ್ನು ನೀಡಬೇಕಾದದ್ದು ಸರಕಾರಗಳ ಕರ್ತವ್ಯ. ಆದರೆ ಸರಕಾರಿ ಶಾಲಾ, ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳ ಸರಕಾರ ಅನ್ಯಾಯ ಮಾಡುತ್ತಿದೆ ಎಂದರು.

ಎಬಿವಿಪಿಯ ಕಾನೂನು ವಿದ್ಯಾರ್ಥಿಗಳ ಪ್ರಮುಖ ಮಂಜುನಾಥ ಹಳ್ಳಿ ಮಾತನಾಡಿ, ರಾಜ್ಯದ ವಿಶ್ವವಿದ್ಯಾಲಯಗಳ ಸ್ಥಿತಿಗತಿ ಶೋಚನೀಯವಾಗಿದೆ. ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳ ಸ್ಥಿತಿಗತಿ ಶೋಚನೀಯವಾಗಿದೆ. ಕರ್ನಾಟಕ ರಾಜ್ಯ ಮೊದಲು ಉನ್ನತ ಶಿಕ್ಷಣಕ್ಕೆ ಹೆಸರುವಾಸಿ ಆದ ರಾಜ್ಯ, ಪ್ರತಿಷ್ಠಿತ ವಿವಿಗಳು ಸಾವಿರಾರು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಿ ಅವರ ಜೀವನವನ್ನು ರೂಪಿಸಿಕೊಳ್ಳಲು ಸಹಕಾರಿಯಾಗಿವೆ. ಆದರೆ ಇತ್ತೀಚಿನ ದಿನಗಳಲ್ಲಿ ರಾಜ್ಯದ ವಿವಿಗಳನ್ನು ಸರಕಾರ ಕಡೆಗಣಿಸಿದೆ. ವಿವಿಗಳಿಗೆ ಯಾವುದೇ ಅನುದಾನ ನೀಡದೇ ಅವುಗಳನ್ನು ಕೇವಲ ವಿದ್ಯಾರ್ಥಿಗಳ ಶುಲ್ಕದ ಮೇಲೆ ನಡೆಸುವಂತೆ ಮಾಡುತ್ತಿದೆ. ಇದರಿಂದ ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳ ಮೇಲೆ ಹಲವಾರು ಶುಲ್ಕಗಳನ್ನು ಹೇರುತ್ತಿದೆ. ಹಿಂದಿನ ಸರ್ಕಾರ ಸ್ಥಾಪಿಸಿದ 09 ವಿಶ್ವವಿದ್ಯಾಲಯಗಳು ಮುಚ್ಚುವ ಸ್ಥಿತಿಯನ್ನು ಸರಕಾರ ನಿರ್ಮಾಣ ಮಾಡುತ್ತಿದೆ. ಖಾಯಂ ಹುದ್ದೆಗಳ ನೇಮಕಾತಿ ಇಲ್ಲದ ಕಾರಣ ಸಕಾಲಕ್ಕೆ ಅಂಕಪಟ್ಟಿ, ಫಲಿತಾಂಶ ಹಾಗೂ ಇನ್ನಿತರ ಸಮಸ್ಯೆಗಳನ್ನು ವಿದ್ಯಾರ್ಥಿಗಳು ಅನುಭವಿಸುವಂತಾಗಿದೆ. ವಿದ್ಯಾರ್ಥಿ ವೇತನ, ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ವಿದ್ಯಾರ್ಥಿ ವೇತನವನ್ನು ನೀಡುವ ಯೋಜನೆಯನ್ನು ಸರಕಾರ ಪ್ರಾರಂಭ ಮಾಡಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಸರಕಾರ ವಿದ್ಯಾರ್ಥಿಗಳಿಗೆ ಸಮರ್ಪಕವಾಗಿ ವಿದ್ಯಾರ್ಥಿ ವೇತನವನ್ನು ತಲುಪಿಸುತ್ತಿಲ್ಲ. ಇದರಿಂದ ವಿದ್ಯಾರ್ಥಿಗಳ ಶಿಕ್ಷಣದ ಮೇಲೆ ಹೊಡೆತ ಬೀಳುತ್ತಿದೆ ಎಂದರು.

ಈ ಸಂದರ್ಭದಲ್ಲಿ ಎಬಿವಿಪಿಯ ವಿಭಾಗ ಸಂಘಟನಾ ಕಾರ್ಯದರ್ಶಿ ಹರ್ಷ ನಾಯಕ, ಶಶಿಕಾಂತ ರಾಕ್ಲೆ, ಚೇತನ ಕೋರವಾರ, ದುಂಡಪ್ಪ ನಿಲೋಗಿ, ಬಾಲಾಜಿ ಬಿರಾದಾರ, ಬಸನಗೌಡ ಕೋನರಡ್ಡಿ, ಕಾರ್ತಿಕ ಬಿರಾದಾರ, ಅಜಯ, ಶಿಲ್ಪಾ ಪೂಜಾರಿ, ನಿಖಿತಾ ರೂಡಿ, ಅಜಯ ಸೋಲಂಕಿ, ಶಶಿಕುಮಾರ ಪಾಟೀಲ, ಸಾಯಿ ಬಿರಾದಾರ ಇತರರು ಭಾಗವಹಿಸಿದ್ದರು.

# ಆರೋಗ್ಯದ ನಡಿಗೆ ಕಾರ್ಯಕ್ರಮಕ್ಕೆ ಚಾಲನೆ

ವಿಜಯಪುರ: ಜೀವನದಲ್ಲಿ ಪ್ರತಿಯೊಬ್ಬರೂ ಆರೋಗ್ಯದಿಂದ ಇದ್ದರೆ ಮಾತ್ರ ತಾವು ಸಂಪಾದಿಸಿದ ಐಶ್ವಯರ್ವನ್ನು ಅನುಭವಿಸಲು ಸಾಧ್ಯವಾಗುತ್ತದೆ. ಇದಕ್ಕಾಗಿ ಪ್ರತಿಯೊಬ್ಬರೂ ಬೆಳಗಿನ ಸಮಯದಲ್ಲಿ ವಾಯುವಿಹಾರ, ಯೋಗ, ಧ್ಯಾನ, ಪ್ರಾಣಾಯಾಮ ಮಾಡುವುದರ ಮೂಲಕ ಆರೋಗ್ಯ ಭಾಗ್ಯವನ್ನು ಹೊಂದಬೇಕೆಂದು ಬೆಂಗಳೂರಿನ ಆರ್ಟ್ ಆಫ್ ಲಿವಿಂಗ್ ನ ಡಾ. ಬಿ.ಎಂ ಪಾಟೀಲ್ ಗುರೂಜಿ ಹೇಳಿದರು.

ಮಂಗಳವಾರ ನಗರದ ಐತಿಹಾಸಿಕ ಸ್ಮಾರಕ ಗೋಲಗುಂಬಜ್ ವಾಯುವಿಹಾರಿಗಳನ್ನು ಉದ್ದೇಶಿಸಿ ಆರೋಗ್ಯ ಸಲಹೆ ನೀಡಿದರು.



ಈ ಸಂದರ್ಭದಲ್ಲಿ ಶ್ರೀ ಸಿದ್ದೇಶ್ವರ ಬ್ಯಾಂಕಿನ ಹಿಂದಿನ ಅಧ್ಯಕ್ಷ ವಿಜಯಕುಮಾರ ಇಜೇರಿ, ಮಾಜಿ ಉಪ ಮಹಾಪೌರ ದಿನೇಶ್ ಹಳ್ಳಿ, ಬಾಪುಗೌಡ ಪಾಟೀಲ, ಡಾ. ರವೀಂದ್ರ ಬೆಳ್ಳಿ, ಡಾ. ಎಸ್.ಜಿ . ಅಸ್ಕಿ ,ಎನ್ .ಡಿ .ಮಸೂತಿ ಚಂದ್ರಶೇಖರ ಸಿಂಧೂರ, ಶಿವಾನಂದ ಮಾಳಗೊಂಡ, ಮಾಂತೇಶ ಪಟ್ಟಣಶೆಟ್ಟಿ ಸೇರಿದಂತೆ ಹಿರಿಯ ನಾಗರಿಕರು ಉಪಸ್ಥಿತರಿದ್ದರು.

# ಶೀಘ್ರದಲ್ಲೇ ರಾಜ್ಯ ಮಟ್ಟದ ಮಕ್ಕಳ ಸಾಹಿತ್ಯ ಸಮ್ಮೇಳನ ಆಯೋಜನೆ



ವಿಜಯಪುರ: ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ರಾಜ್ಯ ಮಟ್ಟದ ಮಕ್ಕಳ ಸಾಹಿತ್ಯ ಸಮ್ಮೇಳನ ಹಮ್ಮಿಕೊಳ್ಳಲು ಬಾಲ ವಿಕಾಸ ಅಕಾಡೆಮಿ ನಿರ್ಧರಿಸಿದೆ ಎಂದು ಕರ್ನಾಟಕ ಬಾಲ ವಿಕಾಸ ಅಕಾಡೆಮಿ ನೂತನ ಅಧ್ಯಕ್ಷ ಅಡಿವೇಶ ಇಟಗಿ ಹೇಳಿದರು.

ನಗರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಚೇರಿಗೆ ಇದೇ ಮೊದಲ ಬಾರಿಗೆ ಭೇಟಿ ನೀಡಿ, ರಾಜ್ಯ ಮಟ್ಟದ ಮಕ್ಕಳ ಸಾಹಿತ್ಯ ಸಮ್ಮೇಳನ ಹಮ್ಮಿಕೊಳ್ಳುವ ಕುರಿತು ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯದ ಎಲ್ಲ ಜಿಲ್ಲೆಗಳಿಗೆ ಪ್ರವಾಸ ಕೈಗೊಂಡು ಮಕ್ಕಳ ಸಾಹಿತ್ಯ ಸಮ್ಮೇಳನಕ್ಕೆ ಪೂರಕವಾದ ವಾತಾವರಣ ಹೊಂದಿರುವ ಜಿಲ್ಲೆಯಲ್ಲಿ ಈ ಸಮ್ಮೇಳನ ನಡೆಸಲಾಗುವುದು.

ಸಾಹಿತ್ಯದಲ್ಲಿ ಆಸಕ್ತಿ ಹೊಂದಿರುವ 18 ವರ್ಷದೊಳಗಿನ ಎಲ್ಲ ಮಕ್ಕಳು ಈ ಸಮ್ಮೇಳನದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿ ಕೊಡಲಾಗುವುದು ಎಂದರು.

ಅದರಲ್ಲಿ ವಿಶೇಷವಾಗಿ ಸರ್ಕಾರಿ ಬಾಲಕರ ಬಾಲಮಂದಿರ, ಬಾಲಕಿಯರ ಬಾಲಮಂದಿರ ಮಕ್ಕಳನ್ನು ಕೂಡ ಭಾಗವಹಿಸುವಂತೆ ನೋಡಿಕೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಮಾರ್ಚ್, ಎಪ್ರಿಲ್ ನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ಹಾಗೂ ಶಿಕ್ಷಕರಿಗೆ ಮೌಲ್ಯ ಮಾಪನ ಪ್ರಕ್ರಿಯೆ ಇರುವುದರಿಂದ ಜೂನ್–2026 ರ 1 ನೇ ವಾರದಲ್ಲಿ ಮಕ್ಕಳ ಆಯ್ಕೆ ಪ್ರಕ್ರಿಯೆ ಹಾಗೂ ಜೂನ್–2026 ಕೊನೆಯ ವಾರದಲ್ಲಿ ರಾಜ್ಯ ಮಟ್ಟದಲ್ಲಿ ಮಕ್ಕಳ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಿ ನಡೆಸಲು ತಯಾರಿ ಮಾಡಿಕೊಳ್ಳಬೇಕೆಂದರು.

ಆಯಾ ಜಿಲ್ಲೆಯಲ್ಲಿರುವ ಮಕ್ಕಳ ಸಾಹಿತಿಗಳ ಪಟ್ಟಿ ಮಾಡಿಕೊಳ್ಳಲು ಎಲ್ಲ ಅಧಿಕಾರಿಗಳಿಗೂ ಸೂಚಿಸಿದರು. ಈ ಕುರಿತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಜಿಪಂ ಸಿಇಒ ಜತೆ ಸಭೆ ಮಾಡಿ ಸಲಹೆ ಸೂಚನೆ ಪಡೆಯಲಾಗುವುದು ಎಂದರು.

ಮಕ್ಕಳ ಸರ್ವಾಂಗೀಣ ಬೆಳವಣಿಗೆ, ಸುರಕ್ಷತೆ ಹಾಗೂ ಭದ್ರತೆಗಾಗಿ ಇಲಾಖೆಯ ಎಲ್ಲ ಅಧಿಕಾರಿಗಳು ಸಕಾರಾತ್ಮಕವಾಗಿ ಕಾರ್ಯ ನಿರ್ವಹಿಸಬೇಕು ಎಂದರು.

ಜಿಲ್ಲಾ ನಿರೂಪಣಾ ಅಧಿಕಾರಿಗಳು ಮಾತನಾಡಿ, ಇಲಾಖೆ ವತಿಯಿಂದ ಮಕ್ಕಳ ಹಬ್ಬ ಕಾರ್ಯಕ್ರಮವನ್ನು ಮಾಡಲಾಗಿದ್ದು, ಅದೆ ರೀತಿ ಈ ಕಾರ್ಯಕ್ರಮದಲ್ಲಿ ಜಾನಪದ ಗೀತೆ, ಸಾಹಿತ್ಯ, ಸ್ವ–ರಚಿತ ಕವನ ವಾಚನ, ನೃತ್ಯ, ನಾಟಕ, ಡೊಳ್ಳು ಕುಣಿತ ಇಂತಹ ಅನೇಕ ಕಲೆಗಳನ್ನು ಹಾಗೂ ಸ್ಪರ್ಧೆಗಳನ್ನು ಮಾಡಬಹುದೆಂದರು.

ತಾಲೂಕು ಮತ್ತು ಜಿಲ್ಲೆಗಳಲ್ಲಿ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸ್ಪರ್ಧೆಗಳನ್ನು ಏರ್ಪಡಿಸಿ ಪ್ರತಿ ಜಿಲ್ಲೆಯಿಂದ ಸಾಹಿತ್ಯ ಆಸಕ್ತಿ ಉಳ್ಳ 5 ಜನ ಮಕ್ಕಳನ್ನು ಗುರುತಿಸಿ ಆಯ್ಕೆ ಮಾಡಿ ರಾಜ್ಯ ಮಟ್ಟದಲ್ಲಿ ಕಳುಹಿಸಲಾಗುವುದು ಎಂದು ತಿಳಿಸಿದರು.

ನಗರ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಬಸವರಾಜ ಜಿಗಳೂರು ಮಾತನಾಡಿ, ಸಮ್ಮೇಳನಕ್ಕಿಂತ ಮುಂಚೆ ಮಕ್ಕಳ ರಥ ಕಾರ್ಯಕ್ರಮ ಮಾಡಬಹುದು ಎಂದರು.

ಈ ಸಭೆಯಲ್ಲಿ ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಆಧಿಕಾರಿಗಳು ಹಾಗೂ ಸಿಬ್ಬಂದಿಗಳು, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲೆಯ ಎಲ್ಲ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಉಪಸ್ಥಿತರಿದ್ದರು.

ಜಿಲ್ಲಾ ನಿರೂಪಣಾಧಿಕಾರಿ ನಿರ್ಮಲಾ .ಎಚ್. ಸುರಪುರ ವಂದಿಸಿದರು.

# ಹಠಾತ್ ಪೊಲೀಸ್ ಠಾಣೆ ಮೇಲ್ಛಾವಣಿ ಕುಸಿತ: ಗಾಬರಿಯಿಂದ ಓಡಿ ಹೋದ ಪೊಲೀಸರು



ವಿಜಯಪುರ: ಠಾಣೆಯಲ್ಲಿ ಪೊಲೀಸರು ವ್ಯಕ್ತಿಯೊಂದಿಗೆ ಮಾತನಾಡುವಾಗ ಏಕಾಏಕಿ ಠಾಣೆಯ ಮೇಲ್ಛಾವಣಿ ಕುಸಿದು ಬಿದ್ದಿರುವ ಘಟನೆ ವಿಜಯಪುರ ನಗರದ ಮಹಿಳಾ ಪೊಲೀಸ್ ಠಾಣೆಯಲ್ಲಿ ನಡೆದಿದೆ.

ಪೊಲೀಸ್ ಅಧಿಕಾರಿಗಳು ವ್ಯಕ್ತಿಯೊಂದಿಗೆ ಚರ್ಚೆ ನಡೆಸಿದಾಗ ಮೇಲ್ಛಾವಣಿ ಕುಸಿದು ಪೊಲೀಸ್ ಹಾಗೂ ವ್ಯಕ್ತಿಯ ಮೇಲೆ ಕುಸಿಯುತ್ತಿತ್ತು. ಆದರೆ, ಅದೃಷ್ಟವಶಾತ್ ಯಾರ ಮೇಲೆಯು ಮೇಲ್ಛಾವಣಿ ಬಿದ್ದಿಲ್ಲ. ಇದರಿಂದ ಯಾರಿಗೂ ಹಾನಿಯಾಗಿಲ್ಲ. ಆದರೆ, ಪೊಲೀಸ ಅಧಿಕಾರಿ ಗಾಬರಿಯಿಂದ ಒಳಗಡೆಗೆ ಓಡಿ ಹೋಗಿದ್ದರು. ಇನ್ನು ಮೇಲ್ಛಾವಣಿ ಕುಸಿತ ಪೊಲೀಸ್ ಠಾಣೆಯ ಸಿಸಿಟಿವಿಯಲ್ಲಿ ಸೆರೆಯಾಗಿದೆ.

# ನಾವು ಪರಿಸರವನ್ನು ರಕ್ಷಿಸಿದರೆ ಪರಿಸರ ನಮ್ಮನ್ನು ರಕ್ಷಿಸುತ್ತದೆ : ಆನಂದ ಟೋಣಪಿ

ಅಥಣಿ : ಹಲವಾರು ದೈವಿಕ ಶಕ್ತಿಗಳಿಂದ ಕೂಡಿದ ಈ ನಮ್ಮ ಪರಿಸರವನ್ನು ರಕ್ಷಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಪರಿಶುದ್ಧತೆಯಿಂದ ಪ್ರಜ್ವಲಿಸುವ ಭೂತಾಯಿ ಜ್ಯೋತಿರ್ಮಯಶಕ್ತಿಯಾಗಿ ಕಂಗೊಳಿಸಿ ತನ್ನೆಲ್ಲ ಮಕ್ಕಳನ್ನು ಸಲಹುತ್ತಾಳೆ ಎಂಬ ನಂಬಿಕೆ ಹಾಗಾಗಿ ಪ್ರತಿಯೊಬ್ಬರೂ ಗಿಡಮರಗಳನ್ನು ನೆಟ್ಟು ಪೋಷಿಸಬೇಕು ಎಂದು ಸಮಾಜ ಸೇವಕ ಆನಂದ ಟೋಣಪಿ ಹೇಳಿದರು.

ಅವರು ತಮ್ಮ ಹುಟ್ಟು ಹಬ್ಬದಂದು ಮನೆಗೊಂದು ಸಸಿ ವಿತರಿಸಿ ಮಾತನಾಡುತ್ತಿದ್ದರು. ಆಮ್ಲಜನಕದ ಕೊರತೆಯಿಂದ ಏನಾಗುತ್ತದೆ ಎಂಬುದನ್ನು ನಾವು ಕರೋನಾ ಸಮಯದಲ್ಲಿ ಕಣ್ಣಾರೆ ಕಂಡವರಿದ್ದೇವೆ.

ನಮಗೆ ಮುಖ್ಯವಾಗಿ ಶುದ್ಧಗಾಳಿ ಬೆಳಕು, ಉತ್ತಮ ಪರಿಸರಕ್ಕಾಗಿ ಗಿಡಮರಗಳನ್ನು ಬೆಳೆಸಿ ಎಂದು ಮನವಿ ಮಾಡಿದ ಅವರು ನನ್ನ ಹುಟ್ಟು ಹಬ್ಬದ ಸವಿ ನೆನಪಿನಲ್ಲಿ ಮನೆಗೊಂದು ಮರ ನೀಡುವ ಮೂಲಕ ಇಂದು ಹುಟ್ಟು ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಿಲು ಸಹಕರಿಸಿದ ಎಲ್ಲ ನನ್ನ ಆತ್ಮೀಯರಿಗೆ ಹೃತ್ಪೂರ್ವಕ ಧನ್ಯವಾದಗಳನ್ನ ಸಲ್ಲಿಸುತ್ತೇನೆ. ಎಂದ ಅವರು ಮುಂದಿನ ಪೀಳಿಗೆಗೆ ಪರಿಸರ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಎಲ್ಲರೂ ಹುಟ್ಟು ಹಬ್ಬ ನೆನಪಿನಲ್ಲಿ ಸಸಿಗಳನ್ನು ವಿತರಿಸಬೇಕು. ದುಂದು ವೆಚ್ಚಕ್ಕೆ ಕಡಿವಾಣ ಹಾಕಿ ಪರಿಸರ ಸ್ನೇಹಿ ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳಬೇಕು ಎಂದರು

ಆನಂತರ ಕಾರ್ಯನಿರತ ಪತ್ರಕರ್ತರ ಸಂಘದ ಅಥಣಿ ತಾಲೂಕಾ ಅಧ್ಯಕ್ಷ ರಾಕೇಶ ಮೈಗೂರ. ಮಾತನಾಡಿ ಸರಳ ಸಜ್ಜನಿಕೆಯ ವ್ಯಕ್ತಿತ್ವದ ಸಮಾಜಸೇವೆಯನ್ನೆ ತನ್ನ ಧ್ಯೇಯ ಮಾಡಿಕೊಂಡಿರುವ ಆನಂದ ಟೋಣಪಿ ಇವರು ಸಾಕಷ್ಟು ಬಡ ಕುಟುಂಬಗಳಿಗೆ ಸಹಾಯ ಸಹಕಾರ ಮಾಡುತ್ತಾ ಹಾಗೂ ಶಿಕ್ಷಣದಿಂದ ಯಾರು ವಂಚಿತರಾಗಬಾರದು ಎಂಬ ಉದ್ದೇಶದಿಂದ ಬಡ ವಿದ್ಯಾರ್ಥಿಗಳಿಗೆ ಧನ ಸಹಾಯ ಮಾಡಿ ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಿದ್ದಾರೆ. ಇಂದು ತಮ್ಮ ಹುಟ್ಟು ಹಬ್ಬದಂದು ಪ್ರತಿ ಮನೆಗೆ ಸಸಿ ವಿತರಿಸುವ ಮೂಲಕ ಪರಿಸರ ಕಾಳಜಿಯನ್ನು ತೋರಿದ್ದಾರೆ. ಇದು ಎಲ್ಲರಿಗೂ ಮಾದರಿಯಾಗಿದೆ ಎಂದರು.

ಈ ಸಂದರ್ಭದಲ್ಲಿ ಪ್ರಕಾಶ ಅಂಬೇಡ್ಕರ್ ಬ್ರೀಗೆಡ್ ತಾಲೂಕಾ ಅಧ್ಯಕ್ಷ ಮಹಾಂತೇಶ ಬಾಡಗಿ ಮಾತನಾಡಿ ಆನಂದ ಟೋಣಪಿ ಇವರ ಸಾಮಾಜಿಕ ಕಳಕಳಿ ಎಲ್ಲರಿಗೂ ಮಾದರಿಯಾಗಿದೆ. ತಮ್ಮ ಹುಟ್ಟು ಹಬ್ಬದಂದು ಪ್ರತಿ ಮನೆಗೆ ಸಸಿ ವಿತರಿಸಿದ್ದು ನೋಡಿದರೆ ಪರಿಸರದ ಬಗ್ಗೆ ಅವರಿಗೆ ಇರುವ ಕಾಳಜಿ ಎತ್ತಿ ತೋರಿಸುತ್ತದೆ. ಅವರ ಈ ಮಾದರಿ ಕಾರ್ಯ ಎಲ್ಲರಿಗೂ ಪ್ರೇರಣೆಯಾಗಲಿ ಎಂದರು



ಅದ್ದೂರಿ ಆಡಂಬರವಿಲ್ಲ, ಪಟಾಕಿ ಸಿಡಿಸಲಿಲ್ಲ, ಕಟೌಟ್ ಫ್ಲೆಕ್ಸ್ ಹಾಕಲಿಲ್ಲ, ಅಚ್ಚಹಸಿರಿನ ಸುಂದರ ಪರಿಸರ ಸಂರಕ್ಷಿಸುವ ನಿಟ್ಟಿನಲ್ಲಿ ಸಮಾಜ ಸೇವಕ ಆನಂದ ಟೋಣಪಿ ಅವರು ಹುಟ್ಟು ಹಬ್ಬದ ನಿಮಿತ್ತವಾಗಿ ಪ್ರತಿ ಮನೆಗೊಂದು ಸಸಿ ವಿತರಿಸುವ ಮೂಲಕ ಪರಿಸರದ ಬಗ್ಗೆ ಜಾಗೃತಿ ಮೂಡಿಸಿ ವಿಶಿಷ್ಟ ರೀತಿಯಲ್ಲಿ ಹುಟ್ಟು ಹಬ್ಬ ಆಚರಿಸಲಾಯಿತು

ಈ ಸಂದರ್ಭದಲ್ಲಿ ರಮೇಶ ಬಾದವಾಡಗಿ, ಅಜೀತ ಇನಾಮದಾರ, ಕಿರಣ ದೇಶಪಾಂಡೆ, ಸಂದೀಪ ಅಳತೇಕರ, ಶ್ರೀನಾಥ್ ದೇಶಪಾಂಡೆ, ದಿಗ್ವಿಜಯ ದೇಸಾಯಿ, ಸುಶಾಂತ್ ಪಟ್ಟಣ, ಪರಸರಾಮ ಕಾವೇರಿ, ಅಭಯ ಪಾಟೀಲ, ಸಂತೋಷ ಲಠ್ಠೆ, ರಾಕೇಶ ಲಗೋಟಿ, ವಿನಾಯಕ ಮಡಿವಾಳ, ಬಸವರಾಜ ಕಾಂಬಳೆ, ಸೇರಿದಂತೆ ಹಲವರು ಇದ್ದರು

## ಸೆಂಟ್ ಪಾಲ್ಸ್ ಶಿಕ್ಷಣ ಮಹಾವಿದ್ಯಾಲಯ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಶಿಕ್ಷಣ ಮಹಾವಿದ್ಯಾಲಯಗಳ ಸಹಯೋಗದಲ್ಲಿ ಆಯೋಜನೆ

# ಕೃತಕ ಬುದ್ಧಿಮತ್ತೆ (AI in Education) ಕುರಿತ ವಿಶೇಷ ಕಾರ್ಯಾಗಾರ




ಬೆಂಗಳೂರು: ಆಧುನಿಕ ಶಿಕ್ಷಣ ವ್ಯವಸ್ಥೆಯಲ್ಲಿ ತಂತ್ರಜ್ಞಾನದ ಕ್ರಾಂತಿಕಾರಿ ಬದಲಾವಣೆಗಳನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ನಗರದ ಸೆಂಟ್ ಪಾಲ್ಸ್ ಶಿಕ್ಷಣ ಮಹಾವಿದ್ಯಾಲಯ ಮತ್ತು ಡಾ.ಬಿ.ಆರ್ .ಅಂಬೇಡ್ಕರ್ ಶಿಕ್ಷಣ ಮಹಾ ವಿದ್ಯಾಲಯಗಳ ಸಹಯೋಗದೊಂದಿಗೆ ಬೆಂಗಳೂರು ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗವು ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ (AI in Education) ಕುರಿತ ವಿಶೇಷ ಕಾರ್ಯಾಗಾರ ಆಯೋಜಿಸಲಾಯಿತು.

ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ಕೃತಕ ಬುದ್ಧಿಮತ್ತೆಯ (Artificial Intelligence) ಪರಿಣಾಮಕಾರಿ ಬಳಕೆ, ಅದರ ಸಾಧಕ-ಬಾಧಕಗಳು ಹಾಗೂ ಭವಿಷ್ಯದ ಶಿಕ್ಷಣದ ಮೇಲೆ ಬೀರುವ ಪ್ರಭಾವದ ಕುರಿತು ಶಿಕ್ಷಕರು ಹಾಗೂ ಶಿಕ್ಷಣಾರ್ಥಿಗಳಲ್ಲಿ ಅರಿವು ಮೂಡಿಸುವುದು ಈ ಕಾರ್ಯಾಗಾರದ ಪ್ರಮುಖ ಉದ್ದೇಶವಾಗಿತ್ತು.

ಕಾರ್ಯಾಗಾರದಲ್ಲಿ ಪ್ರಮುಖವಾಗಿ ಂಖ ಪರಿಕರಗಳ ಬಳಕೆ ಕುರಿತು ತರಗತಿಯ ಬೋಧನೆ ಹೆಚ್ಚು ಆಸಕ್ತಿದಾಯಕವಾಗಿಸಲು ಲಭ್ಯವಿರುವ ನವೀನ ಕೃತಕ ಬುದ್ಧಿಮತ್ತೆ ತಂತ್ರಾಂಶಗಳು (AI Tools) ಮತ್ತು ಅಪ್ಲಿಕೇಶನ್‌ಗಳ ಬಳಕೆಯ ಪ್ರಾತ್ಯಕ್ಷಿಕೆ ನೀಡಲಾಯಿತು. ವೈಯಕ್ತಿಕಗೊಳಿಸಿದ ಕಲಿಕೆ (Personalized Learning): ಪ್ರತಿಯೊಬ್ಬ ವಿದ್ಯಾರ್ಥಿಯ ಕಲಿಕಾ ಸಾಮರ್ಥ್ಯಕ್ಕೆ ತಕ್ಕಂತೆ ಪಾಠ ಯೋಜನೆಗಳನ್ನು ರೂಪಿಸಲು ಂಖ ಹೇಗೆ ನೆರವಾಗುತ್ತದೆ ಎಂಬುವುದರ ಕುರಿತು ತಜ್ಞರು ಮಾರ್ಗದರ್ಶನ ನೀಡಿದರು. ಮೌಲ್ಯಮಾಪನದಲ್ಲಿ ತಂತ್ರಜ್ಞಾನ ಕುರಿತು ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮತ್ತು ಅವರ ಪ್ರಗತಿಯನ್ನು ನಿಖರವಾಗಿ ಟ್ರ್ಯಾಕ್ ಮಾಡಲು ಂಖ ತಂತ್ರಜ್ಞಾನದ ಪಾತ್ರದ ಬಗ್ಗೆ ಚರ್ಚಿಸಲಾಯಿತು. ಶಿಕ್ಷಣದಲ್ಲಿ ತಂತ್ರಜ್ಞಾನವನ್ನು ಬಳಸುವಾಗ ಎದುರಾಗುವ ಸೈಬರ್ ಭದ್ರತೆ, ಡೇಟಾ ಗೌಪ್ಯತೆ ಮತ್ತು ನೈತಿಕ ಸವಾಲುಗಳ ಬಗ್ಗೆಯೂ ಗಂಭೀರ ಚರ್ಚೆ ನಡೆಯಿತು.

ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಡಾ.ಜಯಕರ ಎಸ್.ಎಂ, ಕಜ -ಗಖಊಂ ದ ನೋಡಲ್ ಆಫೀಸರ್ ಆದ ಪ್ರೊಫೆಸರ್ ಡಾ.ವಿ. ಸುದೀಶ್, ಶಿಕ್ಷಣ ವಿಭಾಗದ ಡೀನ್ ಆದ ಡಾ.ಎಂ.ಸಿ. ಯರ್ರಿಸ್ವಾಮಿ, ಶಿಕ್ಷಣ ವಿಭಾಗದ ಮುಖ್ಯಸ್ಥರಾದ ಡಾ.ವಾಣಿಶ್ರೀ ಕೊಪ್ಪದ, ಸೆಂಟ್ ಪಾಲ್ಸ್ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ರಾದ ಡಾ.ರೂಪಾ ಎನ್.ಟಿ ಹಾಗೂ ಡಾ.ಬಿ. ಆರ್. ಅಂಬೇಡ್ಕರ್ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಶಿವಣ್ಣ.ಟಿ ಉಪಸ್ಥಿತರಿದ್ದರು. ಶಿಕ್ಷಣ ವಿಭಾಗದ ಸಂಯೋಜಕಿ ಡಾ.ವಾಣಿಶ್ರೀ ಕೊಪ್ಪದ ಪ್ರಾಸ್ತವಿಕ ನುಡಿ ಗಳೊಂದಿಗೆ ಸರ್ವರನ್ನು ಸ್ವಾಗತಿಸಿದರು. ಸೆಂಟ್ ಪಾಲ್ಸ್ ಶಿಕ್ಷಣ ಕುಲಪತಿಗಳಾದ ಪ್ರೊಫೆಸರ್ ಡಾ.ಜಯಕರ ಎಸ್.ಎಂ ಅವರು ಜ್ಯೋತಿ ಬೆಳಗಿಸುವುದರೊಂದಿಗೆ ಕಾರ್ಯಕ್ರಮ ಉದ್ಘಾಟಿಸಿ ಕಾರ್ಯಕ್ರಮಕ್ಕೆ ಶುಭ ಕೋರಿ, ಉತ್ತಮ ಗುಣಮಟ್ಟದ ಮತ್ತು ಪರಿಣಾಮಕಾರಿ ಬೋಧನೆ ಮತ್ತು ಕಲಿಕೆಗೆ ಆಧುನಿಕ ತಂತ್ರಜ್ಞಾನದ ಸಾಧಕ ಭಾದಕಗಳನ್ನು ಅರಿತು ಅಗತ್ಯಕ್ಕೆ ತಕ್ಕಂತೆ ಬಳಸುವ ಜಾಣ್ಮೆ ಶಿಕ್ಷಕರಿಗೆ ಇರಬೇಕು ಎಂದು ತಿಳಿಸಿದರು.

ತಂತ್ರಜ್ಞಾನ ಮತ್ತು ಶಿಕ್ಷಣ ಕ್ಷೇತ್ರದ ಸಂಪನ್ಮೂಲ ವ್ಯಕ್ತಿಗಳಾಗಿ ಡಾ.ಕೆ. ಥಿಯಾಗು ಸಹ ಪ್ರಾಧ್ಯಾಕರು, ಸ್ಕೂಲ್ ಆಫ್ ಎಜುಕೇಷನ್ ಅಂಡ್ ಟ್ರೇನಿಂಗ, ಸೆಂಟ್ರಲ್ ಯೂನಿವರ್ಸಿಟಿ ಆಫ್ ಕರ್ನಾಟಕ ಕಲ್ಬುರ್ಗಿ ಅವರು ಭಾಗವಹಿಸಿ ವಿಷಯ ಮಂಡನೆ ಮಾಡಿದರು. ಈ ಉಪಯುಕ್ತ ಕಾರ್ಯಾಗಾರದಲ್ಲಿ ಎಂ.ಇಡಿ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ವಿವಿಧ ಕಾಲೇಜುಗಳ ಉಪನ್ಯಾಸಕರು ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡು ಸಂವಾದದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು.

ಅಂತಿಮವಾಗಿ ಭವಿಷ್ಯದ ಶಿಕ್ಷಕರು ಕೇವಲ ಪಠ್ಯಪುಸ್ತಕಗಳಿಗೆ ಸೀಮಿತವಾಗದೇ ತಂತ್ರಜ್ಞಾನ ಸ್ನೇಹಿಯಾಗಬೇಕು ಎಂಬ ಆಶಯದೊಂದಿಗೆ ಹಾಗೂ ಶಿಕ್ಷಣ ವಿಭಾಗದ ಡೀನ್ ರಾದ ಡಾ.ಎಂ.ಸಿ. ಯರ್ರಿಸ್ವಾಮಿ ಅವರು ಕಾರ್ಯಕ್ರಮದ ತಿರುಳನ್ನು ಮೆಲಕು ಹಾಕುತ್ತ ಕಾರ್ಯಕ್ರಮದ ಯಶಸ್ವಿಗೆ ಕಾರಣಿಭೂತರಾದ ಸರ್ವರಿಗೂ ವಂದನೆಗಳನ್ನು ಸಲ್ಲಿಸುವ ಮೂಲಕ ಕಾರ್ಯಾಗಾರವು ಮುಕ್ತಾಯಗೊಂಡಿತು.

# ಅನೆಕಲ್ಲು, ಮಳೆ ಅಬ್ಬರಕ್ಕೆ 39 ಕುರಿಗಳ ಸಾವು : ಬೀದಿಗೆ ಬಂತು ಬಡವನ ಬದುಕು



ಸಂಕೇಶ್ವರ : ಮಂಗಳವಾರ ರಾತ್ರಿ ಸುರಿದ ಅನೆಕಲ್ಲು ಮಿಶ್ರಿತ ಮಳೆ ಗಾಳಿಯ ರಭಸದಿಂದ ಬಡಪಾಯಿ ಕುರಿಗಾಯಿಗೆ ಸೇರಿದ ಲಕ್ಷಾಂತರ ಮೌಲ್ಯದ 39 ಕುರಿಗಳು ಮೃತಪಟ್ಟಿದ್ದು, ಮಳೆಯ ಅಬ್ಬರಕ್ಕೆ ಬಡವನ ಬದುಕು ಬೀದಿಗೆ ಬಂದತಾಗಿದೆ.

ಸಂಕೇಶ್ವರದ ಬಡ ಕುರಿಗಾಯಿ ಶಂಕರ ಕರಜಗಿ ಎನ್ನುವರಿಗೆ ಸೇರಿದ 39 ಕುರಿಗಳನ್ನು ಸಂತೋಷ ಮುಡಸಿ ಅವರ ಹೊಲದಲ್ಲಿ ಹಾಕಲಾದ ಕುರಿಗಳ ದಡ್ಡಿಯಲ್ಲಿ ನಿಲ್ಲಿಸಲಾಗಿತ್ತು. ಆದರೆ ಮಂಗಳವಾರ ರಾತ್ರಿ ಸುರಿದ ಅನೆಕಲ್ಲು ಮಿಶ್ರಿತ ಭಾರಿ ಮಳೆ ಗಾಳಿಗೆ 39 ಕುರಿಗಳ ಮೃತಪಟ್ಟಿವೆ. ಕುರಿಗಳನ್ನು ಸಾಕಾಣಿಕೆ ಮೇಲೆ ಉಪಜೀವನವನ್ನು ಸಾಗಿಸುತ್ತಿದ್ದ ಶಂಕರ ಕರಜಗಿ ಅವರ ಬದುಕು ಈಗ ಬೀದಿಗೆ ಬಂದತಾಗಿದೆ.

ಘಟನಾ ಸ್ಥಳಕ್ಕೆ ಸಂಕೇಶ್ವರ ಗ್ರಾಮ ಆಡಳಿತಾಧಿಕಾರಿ ಎನ್.ಆರ್.ಪಾಟೀಲ ಪಶುವೈದ್ಯರು, ಗ್ರಾಮಸಹಾಯಕ ರಶೀದ್ ನನ್ನುಭಾಯಿ, ಹಾಲುಮತ ಸಮಾಜದ ಮುಖಂಡ ಗಜಾನನ ಕ್ವಳ್ಳಿ ಸೇರಿದಂತೆ ಅನೇಕರು ಭೇಟಿ ನೀಡಿದರು.

# ತೈಲ ಅಭಾವ: ಬಿಸಿಯೂಟಕ್ಕೆ ಕುತ್ತು



ಹಾವೇರಿ: ಇಸ್ರೇಲ್-ಇರಾನ್ ಯುದ್ಧದ ಪರಿಣಾಮಗಳನ್ನು ವಿಶ್ವದ ಅನೇಕ ಇತರ ದೇಶಗಳು ಅನುಭವಿಸಲು ಪ್ರಾರಂಭಿಸಿವೆ. ತೈಲ, ಎಲ್‌ಪಿಜಿ, ಡಾಂಬರು ಮುಂತಾದ ವಿವಿಧ ವಸ್ತುಗಳ ಬೆಲೆಗಳು ಹೆಚ್ಚಾಗಿದ್ದು, ವಾಣಿಜ್ಯ ಸಿಲಿಂಡರ್‌ಗಳ ಕೊರತೆ ಉಂಟಾಗಿದೆ. ಈಗ ಸರ್ಕಾರಿ ಶಾಲೆಗಳಲ್ಲಿ ಬಿಸಿ ಊಟಕ್ಕೂ ಸಿಲಿಂಡರ್‌ಗಳ ಕೊರತೆಯಿದೆ.

**ಬಿಸಿ ಊಟಕ್ಕೂ ಸಿಲಿಂಡರ್‌ಗಳ ಕೊರತೆ:** ಹಾವೇರಿಯ ಮೂರನೇ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ, ಸಿಬ್ಬಂದಿ ಒಂದೇ ಸಿಲಿಂಡರ್‌ನಲ್ಲಿ ಅಡುಗೆ ಮಾಡುತ್ತಿದ್ದಾರೆ. ಶಾಲೆಯು ಸಿಲಿಂಡರ್ ಖಾಲಿ ಆದರೆ ಏನು ಗತಿ ಎಂದು ಅಡುಗೆ ಸಿಬ್ಬಂದಿ ಚಿಂತಿತರಾಗಿದ್ದಾರೆ.

ನಿನ್ನೆಯಿಂದ ಗ್ಯಾಸ್ ಬಾಯ್ ಸಂಖ್ಯೆಯನ್ನು ಸಂಪರ್ಕಿಸುತ್ತಿದ್ದೇವೆ. ಆದರೆ ಅದು ಸ್ವಿಚ್ ಆಫ್ ಆಗಿದೆ. ಸಿಲಿಂಡರ್ ಖಾಲಿಯಾದರೆ, ನಾವು ಮರದ ತುಂಡು ಬಳಸಬೇಕಾಗುತ್ತದೆ. ಮಕ್ಕಳಿಗೆ ಅನ್ನ ಸಾಂಬಾರ್, ಮತ್ತು ಹಾಲು ಬಿಸಿ ಮಾಡಲು ಎಲ್‌ಪಿಜಿ ಸಿಲಿಂಡರ್‌ಗಳು ಬೇಕಾಗುತ್ತವೆ. ಸಿಲಿಂಡರ್‌ಗಳು ಲಭ್ಯವಿಲ್ಲದಿದ್ದರೆ, ಬೇರೆ ದಾರಿಯಿಲ್ಲ. ಕಟ್ಟಿಗೆ ಓಲೆ ಮೇಲೆ ಅಡುಗೆ ಮಾಡಬೇಕಾಗುತ್ತದೆ ಎಂದು ಅಡುಗೆ ಸಿಬ್ಬಂದಿ ಹೇಳುತ್ತಾರೆ.

ಹಾವೇರಿಯ ಪ್ರಮುಖ ಹೋಟೆಲ್‌ಗಳಲ್ಲಿ ವಾಣಿಜ್ಯ ಸಿಲಿಂಡರ್‌ಗಳ ಕೊರತೆಯೂ ಇದೆ. ಪರಿಣಾಮವಾಗಿ, ಹೋಟೆಲ್ ಮಾಲೀಕರು ಚೈನೀಸ್ ಮತ್ತು ಫಾಸ್ಟ್ ಫುಡ್ ಉತ್ಪಾದನೆಯನ್ನು ನಿಲ್ಲಿಸಿದ್ದಾರೆ. ಅವರು ದೋಸೆ, ಪೂರಿ, ಇಡ್ಲಿ ವಡೆಯಂತಹ ವಿವಿಧ ಉಪಾಹಾರ ಪದಾರ್ಥಗಳನ್ನು ಉತ್ಪಾದಿಸುವುದನ್ನು ಸಹ ನಿಲ್ಲಿಸಿದ್ದಾರೆ.

ಹೋಟೆಲ್ ಸಿಬ್ಬಂದಿ ಕಟ್ಟಿಗೆಯಲ್ಲಿ ಕೆಲವು ಭಕ್ಷ್ಯಗಳನ್ನು ಬೇಯಿಸುತ್ತಿದ್ದಾರೆ. ಕೆಲವು ಭಕ್ಷ್ಯಗಳನ್ನು ಇದ್ದಿಲಿನ ಗ್ರಿಲ್‌ನಲ್ಲಿಯೂ ಬೇಯಿಸಲಾಗುತ್ತಿದೆ. ಹೋಟೆಲ್‌ನಲ್ಲಿ ಕೆಲಸ ಮಾಡುವ ಉತ್ತರ ಭಾರತದ ಕೆಲಸಗಾರರು ಸಹ ಇದ್ದಾರೆ ಮತ್ತು ಅವರು ನಿರುದ್ಯೋಗಿಗಳಾಗಿದ್ದಾರೆ. ಹೋಟೆಲ್ ಬಾಡಿಗೆ ಮತ್ತು ಕಾರ್ಮಿಕರ ಸಂಬಳವನ್ನು ಪಾವತಿಸಲು ನಾವು ಕನಿಷ್ಠ ಹೋಟೆಲ್ ನಡೆಸಬೇಕು. ನಮಗೆ ಸಾಧ್ಯವಾದಷ್ಟು ಕಾಲ ನಾವು ಅದನ್ನು ನಡೆಸುತ್ತೇವೆ. ನಂತರ, ನಮಗೆ ಸಿಲಿಂಡರ್‌ಗಳು ಸಿಗದಿದ್ದರೆ ಮತ್ತು ಹೋಟೆಲ್ ಮುಚ್ಚಬೇಕಾದರೆ, ನಾವು ಹೋಟೆಲ್ ಮುಚ್ಚುತ್ತೇವೆ ಎಂಬುದು ಹೋಟೆಲ್ ಮಾಲೀಕರ ನೋವಿನ ನುಡಿ.

ಯುಎಸ್ ಮತ್ತು ಇಸ್ರೇಲ್ ಇರಾನ್ ಮೇಲೆ ದಾಳಿ ಮಾಡಿದಾಗಿನಿಂದ, ಟೆಹ್ರಾನ್ ಹಾರ್ಮುಜ್ ಜಲಸಂಧಿಯನ್ನು ಬಹುತೇಕ ಮುಚ್ಚಿದೆ.

# ಸಂವಹನ ಮತ್ತು ಸಂಪರ್ಕದ ಸೇತುವೆಯೇ ಭಾಷೆ




ವಿಜಯಪುರ: ಸಂವಹನ ಮತ್ತು ಸಂಪರ್ಕದ ಸೇತುವೆಯೇ ಭಾಷೆ. ಒಬ್ಬರಿಗೊಬ್ಬರು ವಿಚಾರ ಅಭಿಪ್ರಾಯ, ಭಾವನೆಗಳನ್ನು ಹಂಚಿಕೊಳ್ಳಲು ಬಳಸುವ ಸೂಕ್ತವಾದ ಸಾಧನೆ. ಭಾಷೆ ಬಲ್ಲವನು ಜಗತ್ತಿನೆಲ್ಲಡೆ ಉತ್ತಮವಾಗಿ ಬದುಕಬಲ್ಲನು. ಭಾಷಾ ಕೌಶಲ್ಯಗಳು ಮಾನವನ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಎಂದು ಸಾಹಿತಿ ಪ್ರೊ. ಎ.ಎಚ್. ಕೊಳಮಲಿ ಅಭಿಪ್ರಾಯಪಟ್ಟರು.

ಬುಧವಾರ ವಿಜಯಪುರ ನಗರದ ಹೊರ ವಲಯದ ಅಲಿ ಯಾಬಾದ ರಸ್ತೆಯಲ್ಲಿರುವ ಎಸ್ ಎಂ ಆರ್ ಕೆ ಶಿಕ್ಷಣ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡ ಭಾಷಾ ಕೌಶಲ್ಯಗಳ ಮಹತ್ವ ಮತ್ತು ಪ್ರಶಿಕ್ಷಣಾರ್ಥಿಗಳಿಗೆ ಸಾಹಿತ್ಯ ರಚನೆಯ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಶಿಕ್ಷಕ ಮತ್ತು ಸಾಹಿತಿ ಒಂದೇ ನಾಣ್ಯದ ಎರಡು ಮುಖ ಇದ್ದಂತೆ. ಶಿಕ್ಷಕರು ಹೆಚ್ಚೆಚ್ಚು ಸಾಹಿತ್ಯದ ಭಂಡಾರವನ್ನು ಓದಿ ಮೌಲ್ಯಯುತ ವಿವಿಧ ಕೃತಿ ರಚಿಸಿದಾಗ ಸಮಾಜ ಪರಿವರ್ತನೆ ಸಾಧ್ಯ. ಶಿಕ್ಷಕರಿಗೆ ಸಾಹಿತ್ಯ ದೇವಿಯ ಕೃಪಾ ಆಶೀರ್ವಾದವಿದೆ. ಶಿಕ್ಷಕರಿಂದಲೆ ಮೌಲ್ಯಾಧಾರಿತ ಕೃತಿ ರಚನೆ ಸಾಧ್ಯ ಎಂದು ಅವರು ಸಾಹಿತ್ಯದ ಮಹತ್ವ ಕುರಿತು ಹೇಳಿದರು.

ಹಿರಿಯ ಪ್ರಾಧ್ಯಾಪಕ ಪ್ರೊ. ಧೂಮಗೊಂಡ ಮಾತನಾಡಿ, ಸಾಹಿತ್ಯ ಸಾವಿಲ್ಲದ ಸಂಪತ್ತು. ಅಂತಹ ಸಂಪತ್ತನ್ನು ಗಳಿಸುವ ವ್ಯಕ್ತಿಗಳು ನೀವು ಆಗಬೇಕೆಂದು ಹೇಳಿದರು. ಕಾಲೇಜಿನ ಪ್ರಾಚಾರ್ಯ ಪ್ರೊ. ಹೂಗಾರ ಮಾತನಾಡಿ, ಪಠ್ಯದ ಜೊತೆಗೆ ವಿಶೇಷ ಚಟುವಟಿಕೆಗಳ ಕಾರ್ಯಕ್ರಮವು ನಮ್ಮ ಕಾಲೇಜಿನಲ್ಲಿ ನಿರಂತರವಾಗಿ ನಡೆಯುತ್ತವೆ. ಇದರಿಂದ ಸಮರ್ಥ ಶಿಕ್ಷಕರಾಗಲು ಸಾಧ್ಯ ಎಂದು ಹೇಳಿದರು.

20 ಅಧಿಕ ಬಿ ,ಎಡ್ ಪ್ರಶಿಕ್ಷಣಾರ್ಥಿಗಳು ಕವನವನ್ನು ವಾಚಿಸಿದರು. ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಸಾಹಿತ್ಯ ರಚನೆಯ ಶಿಬಿರದಲ್ಲಿ ಭಾಗಿಯಾಗಿದ್ದರು.

# ನೀರು ಶುದ್ಧೀಕರಣ ಘಟಕ ಪರಿಶೀಲನೆ



ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಮಹತ್ವಾಕಾಂಕ್ಷಿ 247 ಕುಡಿಯುವ ನೀರಿನ ಸರಬರಾಜು ಯೋಜನೆಗೆ ಹೊಸ ವೇಗ ನೀಡುವ ಉದ್ದೇಶದಿಂದ ಇಂದು ಅಮ್ಮಿನಭಾವಿ ನೀರು ಶುದ್ಧೀಕರಣ ಘಟಕಕ್ಕೆ ಮಹಾಪೌರರ ತಂಡ ಭೇಟಿ ನೀಡಿ ನಡೆಯುತ್ತಿರುವ ಕಾಮಗಾರಿಗಳ ಸಮಗ್ರ ಪರಿಶೀಲನೆ ನಡೆಸಿತು.

ಮಹಾಪೌರರಾದ ಜ್ಯೋತಿ ಪಾಟೀಲ, ಉಪ ಮಹಾಪೌರರಾದ ಸಂತೋಷ ಚವ್ಹಾಣ, ಮಾಜಿ ಮಹಾಪೌರರು ಹಾಗೂ ಸಭಾನಾಯಕ ಈರೇಶ್ ಅಂಚಟಗೇರಿ ಅವರು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಅಮ್ಮಿನಭಾವಿ ಘಟಕದ ವ್ಯಾಪ್ತಿಯಲ್ಲಿ ಜಾರಿಯಲ್ಲಿರುವ ನೂತನ ನೀರು ಶುದ್ಧೀಕರಣ ಮತ್ತು ಸರಬರಾಜು ವ್ಯವಸ್ಥೆಗಳ ಕುರಿತು ಅಧಿಕಾರಿಗಳೊಂದಿಗೆ ಸಮಗ್ರ ಚರ್ಚೆ ನಡೆಸಲಾಯಿತು. ಕಾಮಗಾರಿಗಳ ಗುಣಮಟ್ಟ, ವೇಗ ಮತ್ತು ನಿರ್ವಹಣಾ ಕ್ರಮಗಳ ಕುರಿತು ಮಹಾಪೌರರು ವಿಶೇಷವಾಗಿ ಗಮನ ಹರಿಸಿ, ಸಮಯಬದ್ಧವಾಗಿ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪಾಲಿಕೆ ಆಯುಕ್ತರಾದ ರುದ್ರೇಶ್ ಗಾಳಿ ಅವರು, "ಇನ್ನೂ 8 ದಿನಗಳೊಳಗಾಗಿ ರಾಯಪುರ ಪ್ರದೇಶಕ್ಕೆ ಕುಡಿಯುವ ನೀರಿನ ಪೂರೈಕೆಯನ್ನು ಆರಂಭಿಸಲಾಗುವುದು. ಹಂತ ಹಂತವಾಗಿ ಅವಳಿ ನಗರದ ಎಲ್ಲ ಭಾಗಗಳಿಗೂ ನಿರಂತರ ನೀರು ಸರಬರಾಜು ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು," ಎಂದು ಭರವಸೆ ನೀಡಿದರು.

# ಮಹಿಳೆಯರು ಸ್ವಾವಲಂಬಿ ಬದುಕು ನಡೆಸಬೇಕು : ಗಿರಿಜಾ ಪಾಟೀಲ




ಮುದ್ದೇಬಿಹಾಳ: ಮಹಿಳೆಯರು ಇಂದಿನ ಆಧುನಿಕ ಯುಗದಲ್ಲಿ ಸ್ವಾವಲಂಬಿಯಾಗಿ ಬದುಕಿ ಸಮಾಜದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಂಡು ಕಾರ್ಯನಿರ್ವಹಿಸಬೇಕು ಎಂದು ಶ್ರೀಮತಿ ಗಿರಿಜಾ ಪಾಟೀಲ ಹೇಳಿದರು.

ಪಟ್ಟಣದ ಎಂ.ಜಿ.ವಿ.ಸಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಮಹಿಳೆಯರು ಜೀವನದ ವಿವಿಧ ಆಯಾಮಗಳನ್ನು ಅರಿತು ಸಮಾಜದಲ್ಲಿ ಸಾಧನೆ ಮಾಡಿದ ಹಲವಾರು ಮಹನೀಯ ಮಹಿಳೆಯರ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಮೊಬೈಲ್ ಹಾಗೂ ಸಾಮಾಜಿಕ ಮಾಧ್ಯಮಗಳ ಅತಿಯಾದ ಬಳಕೆಯಿಂದ ದೂರವಿದ್ದು, ತಂದೆ-ತಾಯಿ ಹಾಗೂ ಶಿಕ್ಷಕರು ತಮ್ಮ ಮೇಲೆ ಇಟ್ಟಿರುವ ಭರವಸೆಯನ್ನು ಕಾಪಾಡಬೇಕು ಎಂದು ಪ್ರಶಿಕ್ಷಣಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ಇನ್ನೋರ್ವ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಡಾ. ಶ್ರೀಮತಿ ಸುಮಂಗಲಾ ಅಂಗಡಿ ಮಾತನಾಡಿ, ಮಹಿಳಾ ದಿನಾಚರಣೆಯ ಮಹತ್ವ ಮತ್ತು ಅದರ ಉದ್ದೇಶಗಳ ಕುರಿತು ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅಶೋಕ್ ಎಸ್. ತಡಸದ ಮಾತನಾಡಿ, 'ತೊಟ್ಟಿಲು ತೂಗುವ ಕೈ ಇಡೀ ಜಗತ್ತನ್ನೇ ತೂಗಬಲ್ಲದು' ಎಂಬ ಮಾತಿನಂತೆ ಮಹಿಳೆಯರು ಸಮಾಜದ ಮುಖ್ಯವಾಹಿನಿಯಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಲು ಸಿದ್ಧರಾಗಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರಾಚಾರ್ಯ ಡಾ. ಸಿ.ಎಸ್. ಬಂಡರ್ಗಲ್, ಶ್ರೀಮತಿ ಎಸ್.ಬಿ. ಸುತಾರ, ಶ್ರೀಮತಿ ರೇಣುಕಾ, ಶ್ರೀಮತಿ ಎನ್.ಟಿ. ಗೌಡರ ಹಾಗೂ ಶಿಕ್ಷಣ ಮಹಾವಿದ್ಯಾಲಯದ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಪ್ರಶಿಕ್ಷಣಾರ್ಥಿಗಳು ಮಹಿಳಾ ದಿನಾಚರಣೆಯ ಅಂಗವಾಗಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಸಿದ್ಧರಾಯ್ ಬೇಲಾಳ ಪ್ರಾರ್ಥನೆ ಸಲ್ಲಿಸಿದರು. ಸುನಿತಾ ಮೆಲಿನಮನಿ ಸ್ವಾಗತಿಸಿದರು. ಬಸವರಾಜ ಬೋಳಿಶಟ್ರ ಅತಿಥಿಗಳ ಪರಿಚಯ ಮಾಡಿಕೊಟ್ಟರು. ದಾನೇಶ್ವರಿ ಬಹುಮಾನ ವಿತರಣೆ ನೆರವೇರಿಸಿದರು. ಭಾಗ್ಯಶ್ರೀ ನಿರೂಪಣೆ ನಡೆಸಿದರು. ರೇಣುಕಾ ಹಾಗೂ ರಂಜಿತಾ ವಂದಿಸಿದರು.

# ಇಫ್ತಿಯಾರ ಕೂಟ




ನವಲಗುಂದ: ನವಲಗುಂದ ತಾಲೂಕು ಸೌಹಾರ್ದತೆಗೆ ಸಾಕ್ಷಿಯಾಗಿ ಹಲವಾರು ಪುಣ್ಯಪುರುಷರ ನಾಡಾಗಿಯೂ ಪ್ರಸಿದ್ಧಿ ಪಡೆದಿದ್ದು ಇದರ ಜತೆಗೆ ಹೊಸದಾಗಿ ಪಟ್ಟಣದ ಪಂಚಗ್ರಹ ಹಿರೇಮಠವೂ ಪ್ರಥಮವಾಗಿ ಸೇರ್ಪಡೆಗೊಂಡು ಸೌಹಾರ್ದತೆಯ ಬೀಜ ಬೆಳೆಸಲು ಸಾಕ್ಷಿಯಾಗಿದೆ ಎಂದು ಹಿರೇಮಠದ ನಿಯೋಜಿತ ಪೀಠಾಧಿಕಾರಿ ಶ್ರೀ ವೀರಬಸವ ಸ್ವಾಮಿಜಿ ಅಭಿಪ್ರಾಯ ಪಟ್ಟರು.

ಸ್ಥಳೀಯ ಹಿರೇಮಠದಲ್ಲಿ ರಂಜಾನ ಹಬ್ಬದ ನಿಮಿತ್ತ ಆಯೋಜಿಸಿದ್ದ ಸೌಹಾರ್ದ ಇಫ್ತಿಯಾರ ಕೂಟದ ಸಾನಿಧ್ಯ ವಹಿಸಿ ಮಾತನಾಡಿದ ಅವರು ಎಲ್ಲ ಧರ್ಮದಲ್ಲಿಯೂ ಪರಸ್ಪರ ಪ್ರೀತಿ ವಿಶ್ವಾಸಗಳಿಗೆ ಆದ್ಯತೆಗಳಿದ್ದರೂ ಕೆಲ ಭಿನ್ನಾಭಿಪ್ರಾಯಗಳಿಂದ ಭಾವೈಕ್ಯತೆಗೆ ಆದ್ಯತೆ ಇಲ್ಲದಿರುವುದರಿಂದ ಸಮಾಜದಲ್ಲಿ ಸಮಾನತೆ ಕಾಯ್ದುಕೊಳ್ಳುವುದು ಇಂದಿನ ಅವಶ್ಯವಾಗಿದ್ದು ಎಲ್ಲರೂ ಜಾತಿ,ಧರ್ಮ ಮೀರಿ ಮಾನವೀಯ ನೆಲೆಟ್ಟಿನಲ್ಲಿ ಶಾಂತಿಯಿಂದ ಬದುಕಿದಲ್ಲಿ ಜೀವನದಲ್ಲಿ ನೆಮ್ಮದಿ ಸಾಧ್ಯ ಎಂದರು.

ಯುವ ಮುಖಂಡ ವಿನೋದ ಅಸೂಟಿ ಮಾತನಾಡಿ ಶ್ರೀಮಠ ಸ್ವಾಮೀಜೀಯವರ ಸೌಹಾರ್ದಯುವ ನಡೆಯಿಂದ ತಾಲೂಕಿನಲ್ಲಿ ಶಾಂತಿ ನೆಲೆಸಿ ಎಲ್ಲರೂ ಒಂದಾಗಿ ಬಾಳುವಂಹ ದಿನಗಳು ಬರಲಿ ಎಂದರು.

ಅಂಜುಮನ್ ಸಂಸ್ಥೆಯ ಅಧ್ಯಕ್ಷ ಅಲ್ಲಾಸಾಬ ಕಲ್ಲಕುಟ್ರಿ, ಧರ್ಮಗುರುಗಳಾದ ಇಬ್ರಾಹಿಂಸಾಬ ಕೊಡ್ಲೆಪೇಟೆ. ಬಸೀರಹಮ್ಮದ ಮಕಾನದಾರ, ಸಲೀಂ ಖಾಜಿ, ಬಾಬಾಜಾನ ಮುಲ್ಲಾ, ಅಬ್ಬಾಸ ದೇವರಿಡು,ಸೈಪುದ್ದೀನ ಅವರಾದಿ, ಉಸ್ಮಾನ ಬಬರ್ಚಿ, ಮಾಬುಸಾಬ ತಹಶೀಲ್ದಾರ, ಮೌಲಾಸಾಬ ವೈದ್ಯ, ಕಮಾಲಸಾಬ ಕುಂದಗೋಳ, ಅಣ್ಣಪ್ಪ ಬಾಗಿ,ಯಲ್ಲಪ್ಪ ಭೋವಿ, ಶಶಿಧರಭರತ ಭೋಜನಮಠ, ಶಿವಣ್ಣ ದುತಾರಿ.ಮಲ್ಲಿಕಾರ್ಜುನ ಜಲಾದಿ.ಮರಿತಮ್ಮಪ್ಪ ಹಳ್ಳದ ಸೇರಿದಂತೆ ನೂರಾರು ಜನ ಉಪಸ್ಥಿತ

BELAGAVI VARTE Kannada Daily morning news paper Editor, Printer, Publisher and Owned by MAHESHWARI BHIMASHI BHARAMANNAVAR, 221/1A/1A/1A MAHALINGESHWAR NAGAR, NEAR BCA HOSTEL BELAGAVI KARNATAKA 591307. Printed at RAJADHANI PRINTING PRESS, CTS NO.1720/B1, SHOP NO.2 KELKARBAG, BELAGAVI , KARNATAKA - 590001